ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

04 ಮೇ 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 54 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629





ಅಹಮದಾಬಾದ್ ಗುಜರಾತ್ ಟೈಟನ್ಸ್ ವಿರುದ್ಧ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಅರ್ಧ ಶತಕ (57 ರನ್) ಗಳಿಸಿದ ಪಂಜಾಬ್ ಕಿಂಗ್ಸ್ ತಂಡದ ಸೂರ್ಯಾನ್ಶ್ ಶೆಡ್ಗೆ. ಟೈಟನ್ಸ್‌ಗೆ 164 ರನ್ ಗುರಿ.




ಹಬ್ಬಗಳ ಸಡಗರದ ನಡುವೆ ಆಗದಿರಲಿ ಪರಿಸರ ಮಾಲಿನ್ಯ » 2



ಶೃಂಗೇರಿ ಅಂಚೆ ಮತಗಳ ವರದಿ ಚುನಾವಣಾ ಆಯೋಗಕ್ಕೆ ರವಾನೆ » 3



ಅವಧಿಗೂ ಮೊದಲೇ ಮುಂಗಾರು ಆಗಮನ » 4


# ನಾಯಕತ್ವ ಪಟ್ಟು: ಅಸಲಿ ಆಟ ಶುರು

## ದೆಹಲಿ ಪ್ರಯಾಣಕ್ಕೆ ಸಚಿವರ ತಯಾರಿ | ಗೊಂದಲ ಬಗೆಹರಿಸಲು ಒತ್ತಡ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯ ಸರ್ಕಾರಕ್ಕೆ ಮೇ 20 ರಂದು ಮೂರು ವರ್ಷ ಪೂರ್ಣಗೊಳ್ಳುತ್ತಿರುವುದು ಹಾಗು ಪಂಚ ರಾಜ್ಯ ಚುನಾವಣೆಗಳ ಫಲಿತಾಂಶ ಪ್ರಕಟವಾಗುತ್ತಿರುವ ಹಿನ್ನಲೆಯಲ್ಲಿ ರಾಜ್ಯ ರಾಜಕಾರಣದಲ್ಲಿ ನಾಯಕತ್ವ ಬದಲಾವಣೆಯ ಅಸಲಿ ಆಟ ಶುರುವಾಗುವ ಲಕ್ಷಣಗಳು ಗೋಚರಿಸಿವೆ.

ಮುಖ್ಯಮಂತ್ರಿ ಹುದ್ದೆ ಮೇಲೆ ಕಣ್ಣಿಟ್ಟಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇತ್ತೀಚೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಈ ವಿಚಾರದಲ್ಲಿ ಸ್ಪಷ್ಟನೆ ನೀಡುವಂತೆ ಮನವಿ ಮಾಡಿದ್ದಾರೆ. ಈ ನಡುವೆ ಹಿರಿಯ ಶಾಸಕರು ದೆಹಲಿ ಪ್ರವಾಸಕ್ಕೆ ಸಜ್ಜಾಗಿದ್ದಾರೆ.

ದೆಹಲಿ ಪ್ರವಾಸಕ್ಕೆ ತೆರಳಲಿರುವ ಹಿರಿಯ ಸಚಿವರು ಪ್ರವಾಸದ ಹಿಂದೆ ಕೆಲವೊಂದು ಉದ್ದೇಶಗಳಿವೆ. ಸಂಪುಟ ಪುನಾರಚನೆ ಆದರೆ ಕೆಲವರನ್ನು ಸಂಪುಟದಿಂದ ಕೈಬಿಡುವ ಸಾಧ್ಯತೆ ಇದೆ ಎನ್ನಲಾಗಿದೆ. ಆದರೆ ಯಾರಿಗೆಲ್ಲಾ



ಕೊಕ್ ನೀಡುವ ಸಾಧ್ಯತೆ ಇದೆ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಸಂಪುಟದಲ್ಲಿ ಸ್ಥಾನ ಕಳೆದುಕೊಳ್ಳುವ ಆತಂಕವಿರುವ ಸಚಿವರು ನಾಯಕರನ್ನು ಭೇಟಿ ಮಾಡಿ ಮಾತುಕತೆ ನಡೆಸಲು ಕಸರತ್ತು ನಡೆಸುತ್ತಿದ್ದಾರೆ. ಭೇಟಿ ಸಂದರ್ಭದಲ್ಲಿ ತಮ್ಮ ಇಲಾಖೆಯ ಕೆಲಸ ಕಾರ್ಯಗಳ ಬಗ್ಗೆ ಮನವರಿಕೆ ಮಾಡಿ, ಮನವೊಲಿಸುವ ಪ್ರಯತ್ನ ಮುಂದುವರಿಸಲಿದ್ದಾರೆ. ಹೀಗಾಗಿ ಈ ಭೇಟಿ ಮಹತ್ವ ಪಡೆದುಕೊಂಡಿದೆ.

**ನಾಯಕತ್ವ ಬಗ್ಗೆ ಸ್ಪಷ್ಟ ಚಿತ್ರಣ ನೀಡಿ**

ನಾಯಕತ್ವ ಬದಲಾವಣೆಯ ಬಗ್ಗೆಯೂ ಸ್ಪಷ್ಟ ಚಿತ್ರಣ ನೀಡುವಂತೆ ಹಿರಿಯ ಸಚಿವರು ಹೈಕಮಾಂಡ್ ನಾಯಕರ ಮುಂದೆ ಮನವಿ ಮಾಡಲಿದ್ದಾರೆ. ರಾಜ್ಯದಲ್ಲಿ ನಾಯಕತ್ವ ವಿಚಾರವಾಗಿ ಗೊಂದಲದ ವಾತಾವರಣ ನಿರ್ಮಾಣವಾಗಿದೆ. ಹೀಗಾಗಿ ಈ ಬಗ್ಗೆ ಹೈಕಮಾಂಡ್ ನಾಯಕರು ತಮ್ಮ ನಿಲುವು ಸ್ಪಷ್ಟಪಡಿಸಬೇಕು. ಇಲ್ಲವಾದರೆ ತಪ್ಪು ಸಂದೇಶ ರವಾನೆಯಾಗುತ್ತದೆ. ಕಾರ್ಯಕರ್ತರಲ್ಲೂ ಗೊಂದಲ ಮೂಡುತ್ತದೆ ಎಂದು ವಿವರಿಸುವ ಸಾಧ್ಯತೆ ಇದೆ.

ಎಲ್ಲಾ ಬೆಳವಣಿಗೆಯ ನಡುವೆ ಕಾಂಗ್ರೆಸ್ ಹಿರಿಯ ನಾಯಕ ಬಿ.ಕೆ.ಹರಿಪ್ರಸಾದ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದಾರೆ. ಹರಿಪ್ರಸಾದ್ ಅವರು ಹೈಕಮಾಂಡ್ ನಾಯಕರ ಜೊತೆ ಉತ್ತಮ ಸಂಪರ್ಕ ಹೊಂದಿದ್ದಾರೆ. ಸಿದ್ದರಾಮಯ್ಯ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿರುವುದು ಕುತೂಹಲ ಕೆರಳಿಸಿದೆ.

**ಶಾಸಕರ ಅಭಿಪ್ರಾಯ ಮುಖ್ಯ**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಈಗಿನ ಪರಿಸ್ಥಿತಿಯಲ್ಲಿ ಬದಲಾವಣೆ ಮಾಡುವುದಿಲ್ಲ. ಒಂದು ವೇಳೆ ಬದಲಾವಣೆ ಮಾಡಬೇಕೆಂದು ನಿರ್ಧರಿಸಿದರೆ ಕಡ್ಡಾಯವಾಗಿ ಶಾಸಕರ ಅಭಿಪ್ರಾಯ ಕೇಳಬೇಕು, ಅವರಿಗೆ ಪರ್ಯಾಯವಾಗಿ ಮಲ್ಲಿಕಾರ್ಜುನ ಖರ್ಗೆ ಅವರನ್ನು

» ನಾಲ್ಕನೇ ಪುಟದಲ್ಲಿ

### ಕತ್ತಿ ಹಿಡಿದು ಸಿ.ಎಂ. ಸ್ಥಾನ ಕೇಳಬೇಕಿಲ್ಲ: ಪರಮೇಶ್ವರ್



ನನಗೂ ಮುಖ್ಯಮಂತ್ರಿ ಆಗುವ ಆಸೆ, ಸಾಮರ್ಥ್ಯ ಇದೆ. ಆದರೆ, ಸಾರ್ವಜನಿಕವಾಗಿ ಅಥವಾ ಮಾಧ್ಯಮದ ಮೂಲಕ ಹೇಳುವ ಅವಶ್ಯಕತೆ ಇಲ್ಲ. ಕತ್ತಿ, ಗುರಾಣಿ ಹಿಡಿದು ಮುಖ್ಯಮಂತ್ರಿ ಸ್ಥಾನ ಕೇಳಬೇಕಿಲ್ಲ. ಹೇಳಬೇಕಾದವರಿಗೆ ಖಾಸಗಿಯಾಗಿ ಹೇಳಿದ್ದೇನೆಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಹೇಳಿದ್ದಾರೆ.

ನಾವು ಆಶಾವಾದಿಗಳಾಗಿದ್ದೇವೆ, ದಲಿತ ಮುಖ್ಯಮಂತ್ರಿ ಹುದ್ದೆಗೆ ನನ್ನನ್ನ ಪರಿಗಣಿಸಲ್ಲ ಅಂತ ನಾನ್ಯಾಕೆ ಅಂದುಕೊಳ್ಳಲಿ. ಹೈಕಮಾಂಡ್‌ಗೆ ಪರಮೇಶ್ವರ್ ಏನು ಅಂತ ಗೊತ್ತಿದೆ, ನನ್ನ ಸಾಮರ್ಥ್ಯ ಗೊತ್ತಿದೆ. ಒಂದು ವೇಳೆ ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಮಾಡಿದರೆ ರಾಜ್ಯ ನಡೆಸುವ ಸಾಮರ್ಥ್ಯ ಇದೆ ಎನ್ನುವುದು ಗೊತ್ತಿದೆ. ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿದ್ದಾಗ ಸರ್ಕಾರ ಅಧಿಕಾರಕ್ಕೆ ಬಂದಿದೆ. ಅವರು ಮಹತ್ವದ ಹುದ್ದೆ ಕೇಳುವುದರಲ್ಲಿ ತಪ್ಪಿಲ್ಲ. ನಾವು ಕೂಡ ಖಾಸಗಿ ಆಗಿ ಕೇಳಿದ್ದೇವೆಂದು ಹೇಳಿದ್ದಾರೆ.


## ಮೇ 6ರಂದು ಅರ್ಜುನ ಸ್ಮಾರಕ ಉದ್ಘಾಟನೆ

• ಪ್ರಜೋದಯ ವರದಿ

**ಹಾಸನ:** ಸಕಲೇಶಪುರ ತಾಲ್ಲೂಕು ಯಸಳೂರು ಅರಣ್ಯ ವಲಯದಲ್ಲಿ ನಿರ್ಮಿಸಿರುವ ಅರ್ಜುನ ಆನೆಯ ಸ್ಮಾರಕ ಉದ್ಘಾಟನೆ ಸಮಾರಂಭವನ್ನು ಮೇ 6ರಂದು ಹಮ್ಮಿಕೊಳ್ಳಲಾಗಿದೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ತಿಳಿಸಿದ್ದಾರೆ.

2023ರ ಡಿ.4ರಂದು ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ವೀರಾವೇಶದಿಂದ ಹೋರಾಡಿ, ಪಶುವೈದ್ಯರು, ಸಿಬ್ಬಂದಿ ಜೀವ ಉಳಿಸಿ ಹುತಾತ್ಮನಾದ ಅರ್ಜುನ ಆನೆಯ ಸಮಾಧಿ ಸ್ಥಳದಲ್ಲಿ ನಿರ್ಮಿಸಿರುವ ಸ್ಮಾರಕ ಇದಾಗಿದೆ. ದಸರಾ ಮಹೋತ್ಸವದಲ್ಲಿ 8 ಬಾರಿ ಚಿನ್ನದ ಅಂಬಾರಿ ಹೊತ್ತು ಜನರ ಪ್ರೀತಿಗೆ ಪಾತ್ರನಾಗಿದ್ದ ಅರ್ಜುನ ಆನೆಯ ಸಾವು ಇಲಾಖೆಗೆ ದೊಡ್ಡ ನಷ್ಟವಾಗಿದೆ. ಸಮಾಧಿ ಸ್ಥಳದಲ್ಲಿ ಮತ್ತು ನಾಗರಹೊಳೆಯ ಬಳ್ಳೆಯಲ್ಲಿ ಸ್ಮಾರಕ ನಿರ್ಮಿಸುವುದಾಗಿ ಸರ್ಕಾರ ಭರವಸೆ ನೀಡಿತ್ತು. ಅದರಂತೆ ಈಗಾಗಲೇ ಬಳ್ಳೆ ಶಿಬಿರದಲ್ಲಿ ಅರ್ಜುನನ ಹಿರಿಮೆ, ಸಾಹಸಗಾಥೆಗಳನ್ನು ತಿಳಿಸುವ ರೀತಿಯಲ್ಲಿ ಸ್ಮಾರಕ ಅನಾವರಣ ಮಾಡಲಾಗಿದೆ.

ಮೇ 6ರಂದು ಯಸಳೂರಿನ ಸಮಾಧಿ ಸ್ಥಳದ ಸ್ಮಾರಕ ಉದ್ಘಾಟಿಸ



ಲಾಗುವುದು. ಈ ಎರಡೂ ಸ್ಥಳದಲ್ಲಿ ಅರ್ಜುನ ಆನೆಯ ಪ್ರತಿರೂಪದಂತಿರುವ ಪ್ರತಿಮೆಗಳನ್ನು ನಿರ್ಮಿಸಲಾಗಿದ್ದು, ಅರ್ಜುನ ವಿವಿಧ ಆನೆ ಕಾರ್ಯಾಚರಣೆ, ಹುಲಿ ಮತ್ತು ಚಿರತೆ ಕಾರ್ಯಾಚರಣೆಯಲ್ಲಿ ಮತ್ತು ದಸರಾ ಮಹೋತ್ಸವದಲ್ಲಿ ಪಾಲ್ಗೊಂಡ ಚಿತ್ರಗಳನ್ನು ಹಾಕುವಂತೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಯಸಳೂರಿನಲ್ಲಿ ಸ್ಮಾರಕ ಸಿದ್ಧವಾಗಿ ಹಲವು ತಿಂಗಳುಗಳೇ ಕಳೆದಿವೆ. ಕಾರಣಾಂತರದಿಂದ ಸ್ಮಾರಕ ಉದ್ಘಾಟನೆ ವಿಳಂಬವಾಗಿದ್ದು, ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಶಾಸಕ ಸಿಮೆಂಟ್ ಮಂಜು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆಂದು ಹೇಳಿದ್ದಾರೆ.

# ಸಂಭವನೀಯ ಭೂಕುಸಿತ ಪ್ರದೇಶದಲ್ಲಿ ತಡೆಗೋಡೆ

-ಮಲ್ಲಿಕಾರ್ಜುನ ಕೊಚ್ಚರಗಿ

## ಮಳೆಗಾಲಕ್ಕೂ ಮೊದಲೇ ಮುನ್ನೆಚ್ಚರಿಕೆ ಕ್ರಮ | ಸ್ಥಳೀಯರಲ್ಲಿ ಅರಿವು ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ಮಳೆಗಾಲದಲ್ಲಿ ಭೂಕುಸಿತದಂತಹ ಸಮಸ್ಯೆಯಿಂದ ಸಾರ್ವಜನಿಕರಿಗೆ ಆಗುವ ತೊಂದರೆಯನ್ನು ತಡೆಗಟ್ಟುವ ಉದ್ದೇಶದಿಂದ ಜಿಲ್ಲಾಡಳಿತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದು, ಈ ವರ್ಷವಾದರೂ ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಅವಘಡ, ರಸ್ತೆ ಬಂದ್‌ನಂತಹ ಪ್ರಹಸನಗಳು ಮರುಕಳಿಸುವುದಿಲ್ಲವೆಂಬ ಆಶಾಭಾವ ಮೂಡಿದೆ.

ರಾಷ್ಟ್ರೀಯ ಹೆದ್ದಾರಿ 75ರ ಕಾಮಗಾರಿ ತ್ವರಿತಗತಿಯಲ್ಲಿ ಸಾಗುತ್ತಿದ್ದು, ವರ್ಷಾಂತ್ಯಕ್ಕೆ ಪೂರ್ಣಗೊಳ್ಳುವ ಸಾಧ್ಯತೆ ಇದೆ. 2026ರ ಜೂನ್ ವೇಳೆಗೆ ಬಾಕಿ ಕಾಮಗಾರಿ ಮುಗಿಸುವ ನಿಟ್ಟಿನಲ್ಲಿ ಕೆಲಸ ನಡೆಯುತ್ತಿದೆಯಾದರೂ ಅಷ್ಟರೊಳಗೆ ಕೆಲಸ ಮುಗಿಯುವುದು ಅನುಮಾನ. ಆದ್ದರಿಂದ ಭೂಕುಸಿತ ತಡೆಗಾಗಿ ಹೆದ್ದಾರಿಯಲ್ಲಿ 13 ಜಾಗಗಳನ್ನು ಸಂಭವನೀಯ ಭೂಕುಸಿತ ಪ್ರದೇಶವೆಂದು ಗುರುತಿಸಿ ತಡೆಗೋಡೆ ನಿರ್ಮಿಸಲಾಗುತ್ತಿದೆ. ಜೊತೆಗೆ 55 ಸ್ಥಳಗಳನ್ನು ಅಪಾಯಕಾರಿ ಎಂದು ಗುರುತಿಸಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ. ಈ ಕುರಿತು ಸ್ಥಳೀಯರೊಂದಿಗೆ ಚರ್ಚಿಸಿ ಮಳೆಗಾಲದ ವೇಳೆ ಅನುಸರಿಸಬೇಕಾದ ಕ್ರಮಗಳ ಕುರಿತು ಅರಿವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.



ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಶಾಸಕ ಸಿಮೆಂಟ್ ಮಂಜು ಹಾಗು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿಗಳು ಈ ನಿಟ್ಟಿನಲ್ಲಿ ಮುತುವರ್ಜಿ ವಹಿಸಿದ್ದಾರೆ. ಭೂಕುಸಿತದಿಂದ ರಸ್ತೆ ಬಂದ್ ಆದ ಬಳಿಕ ಪರಿಹಾರಕ್ಕಾಗಿ ಪರಿತಪಿಸುವ ಬದಲು ಮೊದಲೇ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುತ್ತಿರುವುದು ಸಾರ್ವಜನಿಕರಲ್ಲಿ ನೆಮ್ಮದಿಯನ್ನುಂಟು ಮಾಡಿದೆ.

ಮುಖ್ಯವಾಗಿ ಸಕಲೇಶಪುರದಿಂದ ಗುಂಡ್ಯ ವರೆಗೆ ಸಿಗುವ ದೊಡ್ಡತಪ್ಪಲೆ, ಮಾರನಹಳ್ಳಿ, ಹೆಗ್ಗದ್ದೆ, ಆನೆಮಹಲ್, ದೋಣಿಗಲ್, ಕಪ್ಪಳ್ಳಿ ಭಾಗದಲ್ಲಿ ಕಳೆದ ಮೂರು ವರ್ಷಗಳಿಂದ ಭೂಕುಸಿತ ಹೆಚ್ಚುತ್ತಿದೆ. ಇಲ್ಲಿ ತಡೆಗೋಡೆ ನಿರ್ಮಿಸುವ ಕೆಲಸ ಕೈಗೊಳ್ಳಲಾಗಿದೆ.

ಸಕಲೇಶಪುರದಿಂದ ಮಾರನಹಳ್ಳಿವರೆಗೆ ನಡೆಯುತ್ತಿರುವ ರಾಷ್ಟ್ರೀಯ ಹೆದ್ದಾರಿ 75 ಚತುಷ್ಪಥ ರಸ್ತೆ ಅಗಲೀಕರಣ ಕಾಮಗಾರಿ ಪೂರ್ಣಗೊಂಡರೆ ವಾಹನ ಸವಾರರಿಗೆ ಅನುಕೂಲವಾಗಲಿದೆ. ಈಗಾಗಲೇ ಕಾಮಗಾರಿ ಮುಗಿಯುವ ಹಂತಕ್ಕೆ ತಲುಪಿದೆ. ಆದರೆ, ರಸ್ತೆಯ ಎರಡು ಬದಿಗಳಲ್ಲಿ ಅವೈಜ್ಞಾನಿಕವಾಗಿ ಗುಡ್ಡ ಬಗೆದ ಪರಿಣಾಮ ಪ್ರತಿ ಮಳೆಗಾಲ ದಲ್ಲೂ ಗುಡ್ಡ ಕುಸಿಯುತ್ತಿದೆ. ಅದರಿಂದ ಎಚ್ಚೆತ್ತ ಜಿಲ್ಲಾಡಳಿತ ಹಾಗು ಹೆಚ್‌ಎನ್ ಅಧಿಕಾರಿಗಳು ಕ್ರಮಕ್ಕೆ ಮುಂದಾಗಿದ್ದಾರೆ.

### ಮಳೆಗಾಲದಲ್ಲಿ ಭಾರೀ ತೊಂದರೆ

ಬಂದರು ನಾಡು ಮಂಗಳೂರಿನಿಂದ ರಾಜಧಾನಿ ಬೆಂಗಳೂರಿಗೆ ಸಂಪರ್ಕಿಸುವ ಮುಖ್ಯ ರಸ್ತೆ ಇದಾಗಿದೆ. ಭಾರೀ ಗಾತ್ರದ ಲಾರಿಗಳನ್ನು ಸರಕು ಸಾಮಾಗ್ರಿಗಳೊಂದಿಗೆ ಮಂಗಳೂರಿನಿಂದ ಬೆಂಗಳೂರಿಗೆ ತೆರಳುತ್ತವೆ. ಜೊತೆಗೆ ಉದ್ಯೋಗಿಗಳು ಸಹ ಇದೇ ರಸ್ತೆಯನ್ನು ಅವಲಂಬಿಸಿದ್ದಾರೆ. ವಾರಾಂತ್ಯದಲ್ಲಿ ಹೆದ್ದಾರಿಯಲ್ಲಿ ವಾಹನ ದಟ್ಟಣೆ ವಿಪರೀತವಾಗಿರುತ್ತದೆ. ಮಳೆಗಾಲ ಬಂತೆಂದರೆ ಗುಡ್ಡ ಕುಸಿತ, ಮರಗಳು ಧರೆ ಗುರುಳುವುದು, ಕಿ.ಮೀ.ಗಟ್ಟಲೇ ಸಂಚಾರ ದಟ್ಟಣೆ ಉಂಟಾಗಿ ವಾಹನಗಳು ದಿನಗಟ್ಟಲೇ ನಿಂತಲ್ಲೇ ನಿಲ್ಲಬೇಕಾದ ಪರಿಸ್ಥಿತಿ ಇದೆ. ಆದರೆ, ಈ ವರ್ಷ ಬೇಸಿಗೆಯಲ್ಲೇ ಮುಂಜಾಗ್ರತಾ ಕ್ರಮಕ್ಕೆ ಮುಂದಾಗಿರುವುದು ಆಶಾಭಾವ ಮೂಡಿಸಿದೆ.

**ತಡೆಗೋಡೆಯಿಂದ ಪರಿಹಾರ ಅಸಾಧ್ಯ**

ಹೆದ್ದಾರಿಯ ಭೂಕುಸಿತ ಪ್ರದೇಶದಲ್ಲಿ ಕೇವಲ ತಡೆಗೋಡೆ ನಿರ್ಮಿಸಿದರೆ ಪ್ರಯೋಜನವಿಲ್ಲ. ಮಳೆ ನೀರು ಸರಾಗವಾಗಿ ಹರಿಯುವಂತೆ ತಡೆಗೋಡೆ ಮಧ್ಯೆಗಳಲ್ಲಿ ಹೋಲ್‌ಗಳನ್ನು ಮಾಡಬೇಕು. ಇಲ್ಲವಾದರೆ ಅತಿಯಾದ ಶೀತದಿಂದ ತಡೆಗೋಡೆ ಮೇಲೆಯೇ ಭೂಕುಸಿತವಾಗಿ ದೊಡ್ಡ ಅನಾಹುತ ಸಂಭವಿಸುವ ಸಾಧ್ಯತೆ ಇದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದ್ದಾರೆ.

ಕೇಂದ್ರ ಭೂವಿಜ್ಞಾನ ಸಮೀಕ್ಷೆ ಸಂಸ್ಥೆ ಹಾಗು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಶಿರಾಡಿಘಾಟ್ ರಸ್ತೆ ಅಕ್ಕಪಕ್ಕದ ಹದಿಮೂರು ಭೂಕುಸಿತವಾಗುವ, ಆಗುತ್ತಿರುವ ಜಾಗ ಹಾಗು ಸುಮಾರು 55 ಗುಡ್ಡ ಕುಸಿತ ಪ್ರದೇಶಗಳನ್ನು ಗುರುತು ಮಾಡಿದ್ದಾರೆ. 55 ಕಡೆಗಳ ಕೆಲವು ಭಾಗಗಳಲ್ಲಿ ಜನರು ವಾಸವಿದ್ದು ಅವರಿಗೆ ಮಳೆಗಾಲದಲ್ಲಿ ಉಂಟಾಗುವ ಭೂಕುಸಿತದ ಬಗ್ಗೆ ಕಾರ್ಯಕ್ರಮದ ಮೂಲಕ ಅರಿವು ಮೂಡಿಸುವ ಮೂಲಕ ಮಳೆಗಾಲದಲ್ಲಿ ಸಂಭವಿಸುವ ಅನಾಹುತಗಳನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದ್ದಾರೆ.

## ಮೇ 15 ರಿಂದ 3 ದಿನ ಬೆಂಗಳೂರಿನಲ್ಲಿ ಜೆಪಿಎಲ್



• ಪ್ರಜೋದಯ ವರದಿ

**ಹಾಸನ:** ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಜನ್ಮ ದಿನ ಹಾಗು ಜೆಡಿಎಸ್ ಪಕ್ಷದ ರಜತ ಮಹೋತ್ಸವ ಪ್ರಯುಕ್ತ ಪಕ್ಷದ ಸಾಮಾಜಿಕ ಜಾಲತಾಣ ಮತ್ತು ಯುವ ಜನತಾ ದಳ ವಿಭಾಗದಿಂದ ರಾಜ್ಯ ಮಟ್ಟದ ಜನತಾ ಪ್ರೀಮಿಯರ್ ಲೀಗ್ (ಜೆಪಿಎಲ್) ಏರ್ಪಡಿಸಲಾಗಿದೆ.

ಮೇ 15 ರಿಂದ 17ರ ವರೆಗೆ ಬೆಂಗಳೂರಿನ ಮಾದಾವರದ ನೈಸ್ ಮೈದಾನದಲ್ಲಿ ಪಂದ್ಯಾವಳಿ ನಡೆಯಲಿದ್ದು, ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಹಾಗು ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಅವರು ಭಾನುವಾರ ನಗರದ ಹೊಯ್ಸಳ ವಾರಿಯರ್ಸ್ ತಂಡದ ಟಿ ಶರ್ಟ್ ಹಾಗು ಆಹ್ವಾನ ಪತ್ರಿಕೆ ಬಿಡುಗಡೆ ಮಾಡಿದರು.

ಸೂರಜ್ ರೇವಣ್ಣ ಅವರು ಮಾತನಾಡಿ, ಪಕ್ಷದ ಕಾರ್ಯಕರ್ತರನ್ನು ಒಗ್ಗೂಡಿಸಬೇಕೆಂಬ ಉದ್ದೇಶದಿಂದ ಸಾಮಾಜಿಕ ಜಾಲತಾಣ ವಿಭಾಗದವರು ಸೇರಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿದ್ದಾರೆ. ಪ್ರತಿ ಜಿಲ್ಲೆಯಿಂದ ಒಂದು ತಂಡ ಭಾಗವಹಿಸಲಿದೆ ಎಂದರು.

ಮೇ 15ರ ಶುಕ್ರವಾರ ಸಂಜೆ 5 ಗಂಟೆಗೆ ಪಂದ್ಯಾವಳಿ ಆರಂಭಗೊಳ್ಳಲಿದೆ. ಜೆಡಿಎಸ್ ಸಾಮಾಜಿಕ ಜಾಲತಾಣಗಳ ವಿಭಾಗ ರಾಜ್ಯಾಧ್ಯಕ್ಷ ಹೆಚ್.ಎಸ್.ಚಂದನ್, ಯುವ ಮುಖಂಡ ಯಲಹಂಕ ಪ್ರವೀಣ್ ಕಾರ್ಯಕ್ರಮ ನೇತೃತ್ವ ವಹಿಸಿದ್ದಾರೆಂದರು.

ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಪಂದ್ಯಾವಳಿಯ ಉದ್ದೇಶ. ಎಲ್ಲಾ ಜಿಲ್ಲೆಯ ಕ್ರಿಕೆಟ್ ಪ್ರೇಮಿಗಳು ಭಾಗವಹಿಸಲಿದ್ದಾರೆ. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ. ರೇವಣ್ಣ ಸೇರಿ ಎಲ್ಲಾ ಜೆಡಿಎಸ್ ಶಾಸಕರು ಪಾಲ್ಗೊಳ್ಳಲಿದ್ದಾರೆ.

## ಯುದ್ಧ ಬಳಿಕ ವಾಣಿಜ್ಯ ಸಿಲಿಂಡರ್ ದರ ಇಳಿಕೆ : ಜೋಶಿ

• ಪ್ರಜೋದಯ ವರದಿ

**ಬೆಂಗಳೂರು :** ವಾಣಿಜ್ಯ ಸಿಲಿಂಡರ್‌ಗಳ ಬೆಲೆ ಏರಿಕೆ ತೈಲ ಕಂಪೆನಿಗಳ ನಿರ್ಧಾರವಾಗಿದೆ ಎಂದಿರುವ ಕೇಂದ್ರ ಆಹಾರ ಸಚಿವ ಪ್ರಹ್ಲಾದ್ ಜೋಷಿ, ವಿಶ್ವದಾದ್ಯಂತ ಇಂಧನದ ಬಿಕ್ಕಟ್ಟು ಆರಂಭವಾಗಿದೆ. ಜಾಗತಿಕ ಸ್ಥಿತಿಗತಿ ಆಧಾರದ ಮೇರೆಗೆ ಕಂಪೆನಿಗಳು ಎಲ್‌ಪಿಜಿ ಬೆಲೆ ಏರಿಕೆ ಮಾಡಿವೆ. ಯುದ್ಧ ಕೊನೆಗೊಂಡ ಬಳಿಕ ಮತ್ತೆ ಬೆಲೆ ಇಳಿಕೆಯಾಗಲಿದೆ ಎಂದರು.

ದಾವಣಗೆರೆಯಲ್ಲಿ ಭಾನುವಾರ



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಗತ್ತಿನ ಅನೇಕ ದೇಶಗಳಲ್ಲಿ ಪೆಟ್ರೋಲ್, ಡೀಸೆಲ್ ಸಿಗುತ್ತಿಲ್ಲ. ಪಾಕಿಸ್ತಾನ ಸೇರಿ ಹಲವು ದರಿದ್ರ ದೇಶಗಳಲ್ಲೂ ಜನಜೀವನ ಅಸ್ತವ್ಯಸ್ತವಾಗಿದೆ. ಭಾರತದಲ್ಲಿ ಇಂತಹ ಸ್ಥಿತಿ ಇಲ್ಲ. ನೈಸರ್ಗಿಕ ಅನಿಲ, ಪೆಟ್ರೋಲ್ ಹಾಗೂ ಡೀಸೆಲ್‌ಗೆ ತೊಂದರೆಯಾಗಿಲ್ಲ ಎಂದರು.

2004 ರಿಂದ 2014ರ ವರೆಗೂ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಇಂಧನ ಬೆಲೆ ಏರಿಕೆಯ ತೀರ್ಮಾನವನ್ನು ಕಂಪೆನಿಗಳಿಗೆ

» ನಾಲ್ಕನೇ ಪುಟದಲ್ಲಿ

## ಎತ್ತಿನಹೊಳೆ ಯೋಜನೆಯಿಂದ ಕೆರೆಗೆ ನೀರು: ಇಂದು ಚಾಲನೆ

• ಪ್ರಜೋದಯ ವರದಿ

**ಅರಸೀಕೆರೆ:** ಬಯಲು ಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಮಹತ್ವಾಕಾಂಕ್ಷಿ ಎತ್ತಿನಹೊಳೆ ಯೋಜನೆಯಿಂದ ತಾಲ್ಲೂಕಿನ ಕೆರೆಗಳಿಗೆ ನೀರು ಹರಿಸಲಾಗುತ್ತಿದ್ದು, ಮೇ 5ರಂದು ಕಾಮಗಾರಿಗೆ ಚಾಲನೆ ನೀಡಲಾಗುತ್ತಿದೆ.

ಸೋಮವಾರ ಹಾರನಹಳ್ಳಿ ಗ್ರಾಮದ ದೊಡ್ಡ ಕೆರೆಗೆ ಮೊದಲ ಬಾರಿಗೆ ನೀರು ಬಿಡುವ ಮೂಲಕ ಯೋಜನೆಗೆ ನಾಂದಿ ಹಾಡಲಾಗುತ್ತಿದೆ. ಈ ಮಹತ್ವದ ಕಾರ್ಯಕ್ರಮಕ್ಕೆ ಹಾರನಹಳ್ಳಿ ಕೋಡಿಮಠದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಚಾಲನೆ ನೀಡಲಿದ್ದಾರೆ. ಶಾಸಕ ಕೆ.ಎಂ.ಶಿವಲಿಂಗೇಗೌಡ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಶ್ರೇಯಸ್ ಪಟೇಲ್ ಸೇರಿ ಜಿಲ್ಲಾ ಮಟ್ಟದ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

## ಶಾಸಕರಿಗೆ ಎರಡು ದಿನಗಳ ತರಬೇತಿ: ಬಸವರಾಜ ಹೊರಟ್ಟಿ

• ಪ್ರಜೋದಯ ವರದಿ

**ಕೊಪ್ಪಳ:** ಜನರ ನಿರೀಕ್ಷೆಗಳಿಗೆ ತಕ್ಕಂತೆ ಜನಪ್ರತಿನಿಧಿಗಳು ಇರಬೇಕು, ಜನರ ಕಷ್ಟಕ್ಕೆ ಸ್ಪಂದಿಸುವ ಗುಣ ಹೊಂದಿರಬೇಕು, ಈಗಿನ ರಾಜಕಾರಣದಲ್ಲಿ ಎಲ್ಲಾ ಪಕ್ಷಗಳಲ್ಲಿಯೂ ಆ ಗುಣವೇ ಇಲ್ಲದಂತಾಗಿದೆ. ಶಾಸಕರಿಗೆ ಇದರ ಬಗ್ಗೆ ಮಾರ್ಗದರ್ಶನ ಮಾಡಲು ಎರಡು ದಿನಗಳ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳುವ ಯೋಜನೆ ಇದೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಹೇಳಿದರು.

ನಗರದ ಗವಿಮಠದ ಬಳಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸದನದಲ್ಲಿ ಅನಗತ್ಯ ವಿಷಯ ಚರ್ಚೆ ಆಗುತ್ತವೆ. ಈ ಬಾರಿ ನಾನು ಉತ್ತಮವಾಗಿ ಸದನ ನಡೆಸಿದ್ದೇನೆ. ಜೂನ್‌ನಲ್ಲಿ ಬೆಳಗಾವಿ ಅಧಿವೇಶನ ನಡೆಯಲಿದ್ದು, ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದ ಸಮಸ್ಯೆಗಳ ಚರ್ಚೆಗೆ ಎರಡು ದಿನಗಳ ಕಾಲ ಅವಕಾಶ ನೀಡುವೆಂದು



ತಿಳಿಸಿದರು.

ವಿನಯ್ ಕುಲಕರ್ಣಿ ಜೈಲು ಪಾಲಾದ ಬಗ್ಗೆ ಪ್ರತಿಕ್ರಿಯಿಸಿ, ಅಧಿಕಾರ ಇದ್ದಾಗ ಮೈಯಲ್ಲಾ ಕಣ್ಣಾಗಿರಬೇಕು. ವಿನಯ ಕುಲಕರ್ಣಿ ಅದನ್ನು ಗಮನದಲ್ಲಿಟ್ಟುಕೊಳ್ಳಬೇಕಿತ್ತು. ಅಧಿಕಾರ ಶಾಶ್ವತ ಅಂದುಕೊಂಡರೆ ಹೀಗೆಲ್ಲಾ ಸಮಸ್ಯೆಗಳಾಗುತ್ತವೆ ಎಂದರು.

## ಚಲಿಸುತ್ತಿದ್ದ ರೈಲು ಬಡಿದು ವ್ಯಕ್ತಿಗೆ ಗಾಯ



• ಪ್ರಜೋದಯ ವರದಿ

**ಸಕಲೇಶಪುರ:** ಚಲಿಸುತ್ತಿದ್ದ ರೈಲು ಬಡಿದು ರೈಲ್ವೆ ಇಲಾಖೆ ಸಿಬ್ಬಂದಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಎಡಕುಮೇರಿ-ಶಿರಬಾಗಿಲು ರೈಲು ಮಾರ್ಗದ ನಡುವೆ ನಡೆದಿದೆ.

ಸಚಿನ್ ಗಾಯಗೊಂಡಿದ್ದು, ರೈಲ್ವೆ ಇಲಾಖೆಯ ಸಂಬಂಧಿತ ಕಾಮಗಾರಿಯಲ್ಲಿ ತೊಡಗಿದ್ದ ವೇಳೆ ಚಲಿಸುತ್ತಿದ್ದ ರೈಲು ಡಿಕ್ಕಿ ಹೊಡೆದಿದೆ ಎಂದು ತಿಳಿದು ಬಂದಿದೆ. ಅಪಘಾತದ ಪರಿಣಾಮ ಸಚಿನ್ ಅವರಿಗೆ ಎದೆ, ತಲೆ ಹಾಗು ಮುಖಕ್ಕೆ ಗಂಭೀರ ಗಾಯಗಳಾಗಿವೆ. ಘಟನೆಯ ಸ್ಥಳದಲ್ಲಿದ್ದ ಸಹೋದ್ಯೋಗಿ ಕಾರ್ಮಿಕರು ಅವರನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಹಿಮ್ಸ್‌ಗೆ ದಾಖಲಿಸಲಾಗಿದೆ.

## 824 ಕ್ಷೇತ್ರಗಳ ಭವಿಷ್ಯ ನಿರ್ಧಾರ | ಎಲ್ಲರ ಚಿತ್ತ ಮತ ಎಣಿಕೆಯತ್ತ

# ಇಂದು ಪಂಚ ರಾಜ್ಯ ಚುನಾವಣಾ ಫಲಿತಾಂಶ

• ಪ್ರಜೋದಯ ವರದಿ

**ನವದೆಹಲಿ:** ಪಂಚ ರಾಜ್ಯಗಳ ವಿಧಾನ ಸಭಾ ಚುನಾವಣಾ ಫಲಿತಾಂಶಕ್ಕೆ ಕ್ಷಣ ಗಣನೆ ಶುರುವಾಗಿದೆ. ಏ.9ರಂದು ವಿವಿಧ ರಾಜ್ಯಗಳಲ್ಲಿ ಚುನಾವಣೆ ನಡೆದಿತ್ತು. ರಾಷ್ಟ್ರ ರಾಜಕಾರಣದ ದಿಕ್ಸೂಚಿಯಾಗಿರುವ ಈ ಫಲಿತಾಂಶ ದೇಶದ ಗಮನ ಸೆಳೆದಿದೆ. ಅಸ್ಸಾಂ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಪುದುಚೇರಿಯಲ್ಲಿ ಚುನಾವಣೆ ನಡೆದಿದೆ. ಸೋಮವಾರ ಸಂಜೆ ವೇಳೆಗೆ ಸಂಪೂರ್ಣ ಚಿತ್ರಣ ಹೊರಬೀಳಲಿದೆ.

ಮೊದಲು ಅಂಚೆ ಮತ ಪತ್ರ ಎಣಿಕೆ ಮಾಡಿ ನಂತರ ಇವಿಎಂಗಳಲ್ಲಿ ದಾಖಲಾಗಿರುವ ಮತಗಳನ್ನು ಎಣಿಕೆ ಮಾಡುವ ಪ್ರಮಾಣಿತ ಪ್ರಕ್ರಿಯೆ ನಡೆಯುತ್ತದೆ. ಎಲ್ಲಾ ಎಣಿಕೆ ಕೇಂದ್ರಗಳಲ್ಲಿ ಬಹು ಹಂತದ ಭದ್ರತಾ ಕವಚವನ್ನು ಅಳವಡಿಸಲಾಗಿದ್ದು, ಏಕಕಾಲದಲ್ಲಿ ಪ್ರಕ್ರಿಯೆ ನಡೆಯಲಿದೆ. ಈ ಬಾರಿಯ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದ ಫಾಲ್ಟಾ ಕ್ಷೇತ್ರವು ಗಮನ



ಸೆಳೆದಿದೆ. ಚುನಾವಣಾ ಅಕ್ರಮಗಳ ಹಿನ್ನಲೆಯಲ್ಲಿ ಆಯೋಗವು ಕ್ಷೇತ್ರದ ಎಲ್ಲಾ 285 ಬೂತ್‌ಗಳಲ್ಲಿ ಮೇ 21 ರಂದು ಮರು ಮತದಾನ ನಡೆಯಲಿದೆ. ಈ ಕ್ಷೇತ್ರದ ಫಲಿತಾಂಶ ಮೇ 24 ರಂದು ಪ್ರಕಟವಾಗಲಿದೆ.

ಐದು ರಾಜ್ಯಗಳಲ್ಲಿ ಹರಡಿರುವ 824 ಕ್ಷೇತ್ರಗಳ ಈ ಚುನಾವಣಾ ಫಲಿತಾಂಶವು ಕೇವಲ ಅಧಿಕಾರ ಹಸ್ತಾಂತರವಲ್ಲ, ಪ್ರಮುಖ ರಾಜಕೀಯ ಪಕ್ಷಗಳಿಗೆ ರಾಷ್ಟ್ರ ಮಟ್ಟದ ಜನಬೆಂಬಲ ಅಳೆಯುವ ಮಾಪಕವಾಗಿದೆ. ಮೇ 4ರ ಫಲಿತಾಂಶವು ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ಅಸ್ಸಾಂ ಮತ್ತು ಪುದುಚೇರಿಯ ಜನರ ತೀರ್ಪನ್ನು ಜಗತ್ತಿನ ಮುಂದೆ ತೆರೆದಿಡಲಿದೆ. ಪ್ರಜಾಪ್ರಭುತ್ವದ ಈ ದೊಡ್ಡ ಹಬ್ಬದ ಅಂತಿಮ ಫಲಿತಾಂಶವು ಭಾರತದ ರಾಜಕೀಯ ಭೂಪಟದಲ್ಲಿ ಹೊಸ ದಾಖಲೆಗಳನ್ನು ಬರೆಯುವ ನಿರೀಕ್ಷೆ ಇದೆ. ಅಸ್ಸಾಂನಲ್ಲಿ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ನೇತೃತ್ವದ ಬಿಜೆಪಿ, ಪುನರುಜ್ಜೀವನಗೊಳ್ಳುತ್ತಿರುವ ವಿರೋಧ ಪಕ್ಷದ ಮೈತ್ರಿಕೂಟದ ಸವಾಲಿನ ನಡುವೆಯೂ ತನ್ನ ಭದ್ರಕೋಟೆಯನ್ನು ರಕ್ಷಿಸಿಕೊಳ್ಳುವ ಗುರಿ ಹೊಂದಿದೆ.

ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಗೆಲುವಿಗಾಗಿ ಎಲ್ಲಾ ರಾಜಕೀಯ ಪಕ್ಷಗಳು ಅಬ್ಬರದ ಪ್ರಚಾರ ನಡೆಸಿ ಮತದಾರರ ಮನ ಗೆಲ್ಲಲು ಕಸರತ್ತು ನಡೆಸಿವೆ. ಆದರೆ, ಈಗಾಗಲೇ ಚುನಾವಣಾ ಪೂರ್ವ ಮತ್ತು ಚುನಾವಣೋತ್ತರ ಸಮೀಕ್ಷೆಗಳು ಪ್ರಕಟಗೊಂಡಿದ್ದು ಎಲ್ಲರ ಚಿತ್ತ ಫಲಿತಾಂಶದತ್ತ ಕೇಂದ್ರಿಕೃತವಾಗಿದೆ.

### ಕಾಂಗ್ರೆಸ್-ಬಿಜೆಪಿಗೆ ಅಗ್ನಿ ಪರೀಕ್ಷೆ

ಕರ್ನಾಟಕದ ದಾವಣಗೆರೆ ದಕ್ಷಿಣ ಹಾಗು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆದಿದ್ದು, ಸೋಮವಾರ ಫಲಿತಾಂಶ ಪ್ರಕಟವಾಗಲಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಮರ್ಥ್ ಶಾಮನೂರು, ಬಿಜೆಪಿಯಿಂದ ಶ್ರೀನಿವಾಸ್ ದಾಸಕರಿಯಪ್ಪ ಸ್ಪರ್ಧಿಸಿದ್ದರೆ, ಬಾಗಲಕೋಟೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಹೆಚ್.ವೈ.ಮೇಟಿ ಹಾಗು ಬಿಜೆಪಿಯಿಂದ ವೀರಣ್ಣ ಚರಂತಿಮಠ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಎರಡೂ ಪಕ್ಷಗಳಿಗೆ ಈ ಉಪಚುನಾವಣೆ ಅಗ್ನಿ ಪರೀಕ್ಷೆಯಾಗಿದೆ.

ಶತಾಗತಾಯ ಎರಡೂ ಕ್ಷೇತ್ರಗಳಲ್ಲಿ ಗೆದ್ದು 2028ರ ಚುನಾವಣೆಗೆ ಪೂರ್ವ ಸಿದ್ಧತೆಯಲ್ಲಿರುವ ಬಿಜೆಪಿಗೆ ಮತದಾರ ಮಣೆ ಹಾಕಿದ್ದಾನಾಂಬುದು ಗೊತ್ತಾಗಬೇಕಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಮುಸ್ಲಿಂ ಮತಗಳು ಬಾರದಿರುವ ಅನುಮಾನವಿದ್ದು ಅದರ ಲಾಭ ಪಡೆಯುವಲ್ಲಿ ಬಿಜೆಪಿ ಯಶಸ್ವಿಯಾಗಿದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಚುನಾವಣೆ ಘೋಷಣೆಯಾದಾಗಿನಿಂದ ಪಶ್ಚಿಮ ಬಂಗಾಳದಲ್ಲಿ ಆಡಳಿತಾರೂಢ ಟಿಎಂಸಿ ಹಾಗು ಬಿಜೆಪಿ ನಡುವೆ ವಾಕ್ಸಮರಕ್ಕೆ ವೇದಿಕೆಯಾಗಿದ್ದ ಈ ಚುನಾವಣೆ ಕುತೂಹಲ ಕೆರಳಿಸಿದೆ. ಮಮತಾ ಬ್ಯಾನರ್ಜಿ ಮೂರು ಬಾರಿ ಮುಖ್ಯಮಂತ್ರಿಯಾಗಿ ಪಾರುಮತ್ಯ ಮೆರೆದಿದ್ದು, ಈ ಬಾರಿಯ ಚುನಾವಣೆಯಲ್ಲಿ ಟಿಎಂಸಿ ಬುಡ ಅಲುಗಾಡಲಿದೆ ಎಂದು ಹೇಳಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಹಾಗು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನಡುವೆ ನೇರ ಹಣಾಹಣಿ ಏರ್ಪಟ್ಟಿದ್ದು, ಮತದಾರ ಯಾರಿಗೆ ಮತ ಹಾಕುತ್ತಾರೆಂದು ಕಾದು ನೋಡಬೇಕಿದೆ.

## ಮೇ 8 ರಿಂದ ಬೂವನಹಳ್ಳಿ ದೇವಿರಮ್ಮ ಜಾತ್ರೆ

• ಪ್ರಜೋದಯ ವರದಿ

**ಹಾಸನ:** ನಗರ ಹೊರವಲಯದ ಬೂವನಹಳ್ಳಿಯಲ್ಲಿ ಶಕ್ತಿ ದೇವತೆ ದೇವಿರಮ್ಮ ಜಾತ್ರಾ ಮಹೋತ್ಸವ ಮೇ 8 ರಿಂದ 10ರ ವರೆಗೆ ನೆರವೇರಲಿದೆ.

ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ರಥಕ್ಕೆ ಕಳಸ ಪ್ರತಿಷ್ಠಾಪನೆ, ದೇವಿಗೆ ಸಹಸ್ರನಾಮ ಪೂಜೆಯೊಂದಿಗೆ ಸಂಜೆ 4 ಗಂಟೆಗೆ ದೇವಿಯ ರಥಾರೋಹಣ ನೆರವೇರಲಿದೆ. ಸಂಜೆ 7 ರಿಂದ ರಾತ್ರಿ 12ರ ವರೆಗೆ ಮನೋರಂಜನಾ ಕಾರ್ಯಕ್ರಮಗಳು ನಡೆಯಲಿದೆ.

ಮೇ 9ರ ಶನಿವಾರ ಬೆಳಿಗ್ಗೆ 4 ಗಂಟೆಗೆ ಬಾಯಿ ಬೀಗ ಸೇವೆ ಆರಂಭವಾಗಲಿದೆ. ಬೆಳಿಗ್ಗೆ 8.30ಕ್ಕೆ ವೃಷಭ ಲಗ್ನದಲ್ಲಿ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಸಮ್ಮುಖದಲ್ಲಿ ದೇವಿರಮ್ಮ ದೇವತೆಯ ರಥೋತ್ಸವಕ್ಕೆ ಚಾಲನೆ ದೊರೆಯಲಿದೆ. ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ ಜರುಗಲಿದ್ದು, 12.30ಕ್ಕೆ ಪ್ರಸಾದ ವಿನಿಯೋಗ ಕಾರ್ಯಕ್ರಮ ನಡೆಯಲಿದೆ. ಸಂಜೆ 7.30ರಿಂದ ಮೋಹನ್ ಮ್ಯೂಸಿಕ್ ಅವರಿಂದ ಆರ್ಕೆಸ್ಟ್ರಾ ನಡೆಯಲಿದೆ. ಶಾಸಕ ಹೆಚ್.ಪಿ.ಸ್ವರೂಪ್, ಸಂಸದ ಶ್ರೇಯಸ್ ಪಟೇಲ್, ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ, ಮಾಜಿ ಶಾಸಕರಾದ ಪ್ರೀತಮ್ ಜೆ. ಗೌಡ, ಬಿ.ವಿ.ಕರೀಗೌಡ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಸ್ವಾಮಿಗೌಡ, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ ಸೇರಿ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

### ರೈಲು ಸಂಚಾರದಲ್ಲಿ ವ್ಯತ್ಯಯ


**ಹಾಸನ:** ಹೊಳೆನರಸೀಪುರ ಮತ್ತು ಮಂದಗೆರೆ ರೈಲ್ವೆ ನಿಲ್ದಾಣಗಳ ನಡುವೆ ಸೇತುವೆ ಕಾಮಗಾರಿ ಕೈಗೊಂಡಿರುವ ಹಿನ್ನಲೆಯಲ್ಲಿ ಕೆಲ ರೈಲುಗಳ ಸೇವೆಯಲ್ಲಿ ಬದಲಾವಣೆ ಮಾಡಲಾಗಿದೆ. ಮೇ 4ರಂದು ಮೈಸೂರು-ಅರಸೀಕೆರೆ ಪ್ಯಾಸೆಂಜರ್ (ರೈಲು ಸಂ. 56266), ಅರಸೀಕೆರೆ-ಮೈಸೂರು ಪ್ಯಾಸೆಂಜರ್ (ರೈಲು ಸಂ. 56265) ಹಾಗು ಮೈಸೂರು-ಎಸ್‌ಎಂವಿಟಿ ಬೆಂಗಳೂರು ಪ್ಯಾಸೆಂಜರ್ (ರೈಲು ಸಂ. 06269) ರೈಲುಗಳ ಸಂಚಾರ ರದ್ದುಗೊಳಿಸಲಾಗಿದೆ. ಮೇ 4 ರಂದು ಮೈಸೂರಿನಿಂದ ಹೊರಡುವ ಮೈಸೂರು-ಯಶವಂತಪುರ ಎಕ್ಸ್‌ಪ್ರೆಸ್ ರೈಲನ್ನು ಮಾರ್ಗಮಧ್ಯೆ ಸುಮಾರು 2 ಗಂಟೆ 30 ನಿಮಿಷ ನಿಲ್ಲಿಸಲಾಗುತ್ತದೆ.

CMYK CMYK CMYK CMYK



# ಭಾವ ಲಹರಿ

## ಕನ್ನಡ ಕವನಗಳು



## ಗುರುತು

ಗುರುತಾಯಿತೇ ಎಂದಳು ಮೊನ್ನೆ ಸಿಕ್ಕವಳು;
ಎದುರಿಗೇ ನಿಂತಿದ್ದಳು, ಪರಿಚಿತಳೇ? ನಕ್ಕಳು
ಹಳೆಯ ರೂಪಕದಲ್ಲಿ ಹೂವು ಬಿರಿದಂತೆ
ತಬ್ಬಿಬ್ಬಾಗಿ ನೋಡಿದೆ: ಉರಿದ ಜ್ವಾಲೆ
ಆರಿ ಕಣ್ಣಲ್ಲಿ ನಿಗಿನಿಗಿ ಕೆಂಡವೂ ಉಳಿಯದೆ
ಬಿಟ್ಟ ಬೂದಿಯಲ್ಲಿ ಹೆಜ್ಜೆ ಗುರುತುಗಳೂ ಇರಲಿಲ್ಲ
ಮೈಬಣ್ಣದಲ್ಲಿ ಎಷ್ಟೊ ಬಣ್ಣಗಳು ಬೆರೆತು ಉಳಿದ
ಬಣ್ಣಕ್ಕೆ ಚಹರೆಯೇ ಇದ್ದಂತಿರಲಿಲ್ಲ;
ಕಾಲದ ರಭಸದ ಓಟಕ್ಕೆ ಸಿಕ್ಕಿ ನಜ್ಜುಗುಜ್ಜಾಗಿದ್ದಳು
ರಭಸದ ಚೆಂಡು ನೆಲಕ್ಕೆ ಬಡಿದು ಮುಗಿಲಿಗೆ ಹಾರಿ
ಎಲ್ಲಿ ಮಾಯವಾಯಿತು? ಗಾಳಿ ತುಂಬಿದ ಬೆಲೂನು
ದಿಕ್ಕು ದೆಸೆಯಿಲ್ಲದೆ ಏರೇರಿ ಮುಗಿಲ ಹಾದಿಯಲ್ಲಿ
ಕಾಣುತ್ತ ಕಾಣುತ್ತ ಚುಕ್ಕೆಯಾಗಿ ಮತ್ತೆ ಮಾಯವಾಗಿ
ಯಾವ ದಾರಿ, ಯಾವ ಗುರುತು, ಗುರುತಾಯಿತೇ
ಎಂದರೆ ಯಾವ ಗುರುತು? ಬಾಲ್ಯಕೊಂದು ಗುರುತು
ಯೌವನದ ರಭಸ ತುಳುಕಿದರೆ ಮತ್ತೊಂದು, ಮುಂದೆ
ಹಾದಿ ಕವಲೊಡೆದು ಎತ್ತ ಪಯಣವೊ, ಹೇಳಲಿ ಹೇಗೆ
ಎದುರು ನಿಂತವಳು ಯಾರೆಂದು, ಯಾವ ಗುರುತೆಂದು?
ಮಾತು, ಮಾತಿನ ಗತ್ತು ಗೊತ್ತು ಎನ್ನುವಂತೆ, ಗೊತ್ತಿರದಂತೆ
ಅರ್ಥದ ಬೆನ್ನುಹತ್ತಿದರೆ, ಯಾವುದಕ್ಕೆ ಏನು ಅರ್ಥ, ಅನರ್ಥ
ಅಪಾರ್ಥ, ತಿಳಿದಿತ್ತೆ ಪಾರ್ಥನಿಗೆ ತಾನು ಬಿಟ್ಟ ಬಾಣದ ಹಾದಿ
ನೆತ್ತರ ಕೆಸರಲ್ಲಿ ಹೂತ ಚಕ್ರವ ಎತ್ತುತ್ತಿದ್ದ ಕರ್ಣನ ಎದೆಯಾಳದ
ಉಸಿರ ಬಡಿತ? ನೋಟದಲ್ಲೆ ನಗು ತುಳುಕಿಸಿದ ಕೃಷ್ಣನ ಕುಹಕ?
ನಗುತ್ತಲೇ ಇದ್ದಳು ನನ್ನ ಗೊಂದಲಕ್ಕೆ, ಆ ನಗುವಿನಲ್ಲಿತ್ತೆ
ಈಕೆಯ ಗುರುತು? ಮತ್ತೆ ಮತ್ತೆ ಕಣ್ಣಿಟ್ಟು ನೋಡಿದರೆ
ನಗುವು ನಗುವಾಗಿರಲಿಲ್ಲ, ನೋವಿನಲಿ ಅದ್ದಿ ತೆಗೆದ ಬಣ್ಣವನು
ಹೊದ್ದ ಚಾದರದಂತೆ ಕಂಡು ಎದುರು ನಿಂತವಳು ಮಾಯಾವಿ-
ಯಂತೆ ಕಂಡಿತು. ಕಾಣವುದು, ಕಾಣಿಸುವುದು, ಗೋಚರಿಸುವುದು
ಎಷ್ಟೊ ಪದಗಳ ಹಿಡಿದೆಳೆದರೂ ಗುರುತಿನ ಎಳೆಯೇ ಸಿಕ್ಕಲಿಲ್ಲ
ನನ್ನ ಗುರುತಿರಬೇಕು ಅವಳಿಗೆ, ಹಗುರಾಗಿ ಹತ್ತಿರ ಬಂದು ಕೈ
ಕುಲಕಿ ಕೇಳಿದಳಲ್ಲ, ಗುರುತಾಯಿತೇ ಎಂದು? ಅವಳ ನಗೆಯಲ್ಲೂ
ನನ್ನ ಗುರುತು ಇದ್ದಂತಿತ್ತು, ಎಷ್ಟು ಸುಲಭ, ಸರಳ ಗುರುತೆಂಬುದು
ಯಾವುದು ನನ್ನ ಗುರುತು? ಯಾವುದು ನನ್ನ ಚಹರೆ? ಕಣ್ಣೆ, ಮೂಗೇ,
ಚರ್ಮದ ಬಣ್ಣವೇ, ಮಾತೆಂಬ ಮಾತಿನ ಗತ್ತೆ, ಅರ್ಥವಾಗದ ಸುಳಿಯೇ?
ಸುಮ್ಮನೇ ನೋಡುತ್ತ ನಿಂತೆ, ನಗಬೇಕೆಂದರೂ ನಗುವಿನ ನೆರಳೂ ಸುಳಿಯಲಿಲ್ಲ

**- ಜಿ.ಪಿ.**ಬಸವರಾಜು

ಅವಲೋಕನ

ಹಬ್ಬಗಳೆಂದರೆ, ಸಂಭ್ರಮ-ಸಡಗರ. ಆದರೆ, ಅವುಗಳಿಂದ ಘನತ್ಯಾಜ್ಯದ ಭಂಡಾರ! ದೀಪಾವಳಿಯ ವೇಳೆ ಶಬ್ದಮಾಲಿನ್ಯದ ಜೊತೆಗೆ ಸೃಷ್ಟಿಯಾಗುತ್ತೆ ಪಟಾಕಿ ತ್ಯಾಜ್ಯ. ಮದುವೆ-ಮುಂಜಿಗಳಾಗುತ್ತಿವೆ ಮಾಲಿನ್ಯದ ಕೂಪ. ನಮ್ಮ ರಾಜ್ಯದಲ್ಲಿ ನಿತ್ಯ ಸಂಗ್ರಹವಾಗುವ ತ್ಯಾಜ್ಯದಲ್ಲಿ ಶೇ.53ರಷ್ಟು ಮಾತ್ರ ವಿಲೇವಾರಿ! ದೇಶದ ಮುಂದಿದೆ ಔಭಿಜಚ್ಛಢ ಗಚಠಂಿಥಿ ಸವಾಲು.

ಜಾತಿಧರ್ಮಗಳನ್ನು ಮೀರಿದ್ದು ಎಂಬುದಕ್ಕೆ ದೊಡ್ಡ ಉದಾಹರಣೆಯೆಂದರೆ, ಮಾನವನ ಬದುಕಿನ ಪರಿವರ್ತನೆಯಿಂದ ಉತ್ಪಾದನೆ ಆಗುತ್ತಿರುವ ತ್ಯಾಜ್ಯದ ಪ್ರಮಾಣ. ಜೀವನ ಶೈಲಿಯು ಬದಲಾದ ಪರಿಣಾಮವಾಗಿ ಪರಿಸರವು ಅಡ್ಡಾದಿಡ್ಡಿಯಾಗಿ ಕುಲಷಿತವಾಗುತ್ತಿದೆ. ಅದರಲ್ಲೂ ಹಬ್ಬಹರಿದಿನಗಳಲ್ಲಿ ಮಾಲಿನ್ಯದ ಪ್ರಮಾಣವು ಅಂಕೆಗೆ ಸಿಗದಷ್ಟು ಏರಿಕೆಯಾಗುತ್ತದೆ. ಇದಕ್ಕೆ ಯಾವ ಧರ್ಮದ ಹಬ್ಬಗಳೂ ಹೊರತಾಗಿಲ್ಲ.

ಹಬ್ಬಗಳನ್ನು ನಮ್ಮ ಪೂರ್ವಿಕರು ಸದುದ್ದೇಶದಿಂದ ಪೀಳಿಗೆಯಿಂದ ಪೀಳಿಗೆಗೆ ಮುಂದುವರಿಯುವ ಹಾಗೆ ಸಂಪ್ರದಾಯಗೊಳಿಸಿದ್ದರಾದರೂ ಬರುಬರುತ್ತಾ ಅವುಗಳ ಆಚರಣೆಯ ದಿಕ್ಕೇ ಬದಲಾಗಿದೆ, ಅದ್ದೂರಿತನದಿಂದಾಗಿ ಹಬ್ಬಗಳು ಮಾಲಿನ್ಯದ ಏರಿಕೆಗೆ ಕಾರಣವಾಗುತ್ತಿವೆ.

ಹಬ್ಬಗಳ ಆಚರಣೆಯಿಂದ ಹತ್ತು ಹಲವು ಪ್ರಯೋಜನಗಳಿವೆ. ಪ್ರವಾಸಿಗರನ್ನು ಆಕರ್ಷಿಸುವುದರಿಂದ ವ್ಯಾಪಾರ ವಹಿವಾಟುಗಳು ಹೆಚ್ಚಾಗುವುದು, ಆ ಮೂಲಕ ಆರ್ಥಿಕತೆಯು ಉತ್ತೇಜನಗೊಳ್ಳುವುದು, ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಿ ಪೀಳಿಗೆಯ ಜೀವನ ಕ್ರಮವನ್ನು ಅರ್ಥಮಾಡಿಕೊಳ್ಳುವ ಹಾಗೂ ಮೌಲ್ಯಗಳನ್ನು ಪಾಲಿಸಲು ಸಹಕಾರಿ ಆಗುವುದು, ಹಬ್ಬಗಳು ಕುಟುಂಬಗಳನ್ನು ಗಟ್ಟಿಗೊಳಿಸುತ್ತವೆ (ಇಂದು ಇದರ ಕೊರತೆಯು ಹೆಚ್ಚಾಗಿ ಕಾಡುತ್ತಿದೆ), ವಿಭಿನ್ನ ಸಂಸ್ಕೃತಿಯ ಸಮೂಹಗಳು ಆಚರಣೆಯ ಸಮಯದಲ್ಲಿ ಒಗ್ಗೂಡುತ್ತವೆ.

ಇದರಿಂದ ಧರ್ಮಗಳ ಸಾರವನ್ನು ಅರ್ಥ ಮಾಡಿಕೊಳ್ಳಲು ಸಹಕಾರಿ ಆಗುವುದು. ಹಬ್ಬಗಳನ್ನು ಆಚರಿಸುವ ಸಂಪ್ರದಾಯವು ನಮ್ಮ ಪರಂಪರೆಯು ಸಂತೋಷ, ಸುಖಶಾಂತಿ ಮತ್ತು ಸೌಹಾರ್ದತೆಯಿಂದ ಜೀವಿಸಲು ವಿಶೇಷವಾದ ಪ್ರೇರಣೆ ನೀಡುವಂಥವು. ಜಾತ್ರೆಗಳು, ವಿಶ್ವಕನ್ನಡ ಸಾಹಿತ್ಯ ಸಮ್ಮೇಳನ, ಕುಂಭಮೇಳ ಹಾಗೂ ದಸರಾದಂತಹ ಸಾರ್ವಜನಿಕ ಆಚರಣೆಗಳು ಎಲ್ಲಾ ಜಾತಿಧರ್ಮಗಳನ್ನು ಒಗ್ಗೂಡಿಸುತ್ತವೆ ಪರಿಣಾಮವಾಗಿ ಸಹಬಾಳ್ವೆಯ ಜೀವನಕ್ಕೆ ಅನುವು ಮಾಡಿಕೊಡುವುದು.

ಧಾರ್ಮಿಕ ಆಚರಣೆಗಳು ಜನರ ನಂಬಿಕೆಗೆ ಗಟ್ಟಿಯಾಗಿ ಅಂಟಿಕೊಂಡಿರುವುದರಿದ ಕಾರಣಗಳನ್ನು ಕೊಟ್ಟು ಹಬ್ಬಗಳನ್ನು ನಿಷೇಧಿಸುವ ಸಾಹಸಕ್ಕೆ ಯಾವ ಸರ್ಕಾರಗಳು ಧೈರ್ಯ ಮಾಡುವುದಿಲ್ಲ, ಅಷ್ಟು ಆಳವಾಗಿ ಹಬ್ಬಗಳು ಬದುಕಿನಲ್ಲಿ ಬೇರೂರಿವೆ.

ಹಿಂದಿನ ದಿನಗಳಲ್ಲಿ ಅಷ್ಟಾಗಿ ಆಚರಣೆಗಳಲ್ಲಿ ಇರದಿದ್ದ ಹಬ್ಬಗಳಾದ ವರಮಹಾಲಕ್ಷ್ಮಿ ಹಬ್ಬ, ತುಳಸಿ ಹಬ್ಬ, ಒಂದು ಗ್ರಾಂ ಚಿನ್ನವನ್ನಾದರೂ ಕೊಳ್ಳಿ ಒಳ್ಳೆಯದು ಎನ್ನುವ ಅಕ್ಷಯ ತೃತೀಯ, ಗಂಡನನ್ನು ಪೂಜಿಸುವ ಭೀಮನ ಅಮಾವಾಸ್ಯೆ ಪೂಜೆಗಳು ಮಾಧ್ಯಮಗಳ ಪ್ರಭಾವಳಿ ಹೆಚ್ಚಾದಂದಿನಿಂದ ಆಚರಿಸದೇ ಇದ್ದವರೂ ಸಹ ಅದ್ದೂರಿಯಾಗಿ ಆಚರಿಸಿ ಸಂಭ್ರಮಿಸುತ್ತಿದ್ದಾರೆ.

ನಮ್ಮ ಹಬ್ಬಗಳು ನಮಗೆ ಬೇಕೇಬೇಕು, ನಿಲ್ಲಿಸಲು ಘನವಾದ ಕಾರಣಗಳು ಏನೇ ಇರಬಹುದು, ಆದರೆ ಖಂಡಿತ ಯಾರೂ ನಿಷೇಧಿಸಲಾಗದು. ಹಾಗೆಯೇ ಇತರೆ ಅನ್ಯಧರ್ಮೀಯರ ಹಬ್ಬಗಳನ್ನೂ ಸಹ ಆಚರಣೆಯಿಂದ ನಿಲ್ಲಿಸಲಾಗದು. ಇದು ಸಮಾಜದಲ್ಲಿ ಸೂಕ್ಷ್ಮ ವಿಚಾರದ

**“ ನಮ್ಮ ಹಬ್ಬಗಳು ನಮಗೆ ಬೇಕೇಬೇಕು, ನಿಲ್ಲಿಸಲು ಘನವಾದ ಕಾರಣಗಳು ಏನೇ ಇರಬಹುದು, ಆದರೆ ಖಂಡಿತ ಯಾರೂ ನಿಷೇಧಿಸಲಾಗದು. ಹಾಗೆಯೇ ಇತರೆ ಅನ್ಯಧರ್ಮೀಯರ ಹಬ್ಬಗಳನ್ನೂ ಸಹ ಆಚರಣೆಯಿಂದ ನಿಲ್ಲಿಸಲಾಗದು. ಇದು ಸಮಾಜದಲ್ಲಿ ಸೂಕ್ಷ್ಮ ವಿಚಾರದ ವಿಷಯಗಳು. ಈಗ ನಾನು ಮುಖ್ಯ ವಿಷಯಕ್ಕೆ ಬರುತ್ತಿದ್ದೇನೆ, ನಾವು ನೆಲೆಸಿರುವ ಭೂಮಿ ಹಾಗೂ ಪರಿಸರವನ್ನೂ ಮಾಲಿನ್ಯಗೊಳಿಸದೆ ಮುಂದಿನ ಪೀಳಿಗೆಗೆ ಉಳಿಸಿ ಹೋಗುವುದು ಎಲ್ಲರ ಕರ್ತವ್ಯವೂ ಹೌದು.**

# ಹಬ್ಬಗಳ ಸಡಗರದ ನಡುವೆ ಆಗದಿರಲಿ ಪರಿಸರ ಮಾಲಿನ್ಯ

ವಿಷಯಗಳು. ಈಗ ನಾನು ಮುಖ್ಯ ವಿಷಯಕ್ಕೆ ಬರುತ್ತಿದ್ದೇನೆ, ನಾವು ನೆಲೆಸಿರುವ ಭೂಮಿ ಹಾಗೂ ಪರಿಸರವನ್ನೂ ಮಾಲಿನ್ಯಗೊಳಿಸದೆ ಮುಂದಿನ ಪೀಳಿಗೆಗೆ ಉಳಿಸಿ ಹೋಗುವುದು ಎಲ್ಲರ ಕರ್ತವ್ಯವೂ ಹೌದು.

ಹಬ್ಬಗಳ ಆಚರಣೆಯಲ್ಲಿ ಇದನ್ನು ನಿರ್ಲಕ್ಷಿಸಲಾಗದು. ಹಾಗಾದರೆ ಹಬ್ಬಗಳು ನಮ್ಮ ನಾಡಿನ ಸಂಸ್ಕೃತಿಯ ಪ್ರತೀಕವೆಂದು ಆಚರಿಸಿ ಪರಿಸರವನ್ನು ಹಾಳು ಮಾಡುವುದು ಎಷ್ಟು ಸರಿ? ಪ್ರಾಣಿಪಕ್ಷಿಗಳು ಹಬ್ಬಗಳನ್ನು ಮಾಡುತ್ತವೆಯೇ? ಹಾಗಂತ ಹೇಳುವುದಕ್ಕೆ ಆಗುತ್ತದೆಯೇ? ಮನುಷ್ಯರು ಪ್ರಾಣಿಗಳಿಗಿಂತ ವಿಭಿನ್ನ, ಮುಂದುವರಿದ ಸಂತತಿ ಎಂಬ ಉತ್ತುಂಗ ಸ್ಥಾನದಲ್ಲಿ ಮನುಷ್ಯ ಇದ್ದಾನೆ. ಅವನಿಗೆ ಹಬ್ಬಗಳು ಬೇಕೇಬೇಕು.

ಹಬ್ಬಗಳ ಆಚರಣೆ ಸಂದರ್ಭಗಳಲ್ಲಿ ಸಾಮಾನ್ಯ ದಿನಗಳಿಗಿಂತ ಹೆಚ್ಚು ಪ್ರಮಾಣದಲ್ಲಿ ತ್ಯಾಜ್ಯ ಉತ್ಪತ್ತಿ ಆಗುತ್ತದೆ. ವಿಷಕಾರಿ ವಸ್ತು ಹಾಗೂ ಬಣ್ಣಗಳಿಂದ ತಯಾರಿಸಿದ ವಿಗ್ರಹಗಳನ್ನು ಕೆರೆಕಟ್ಟೆ ನದಿಕಾಲುವೆಗಳಲ್ಲಿ ಮುಳುಗಿಸುವುದರಿಂದ ನೀರನ್ನು ವಿಷವಾಗಿಸಿ ಜಲಮಾಲಿನ್ಯಗೊಳಿಸುತ್ತಿದ್ದೇವೆ, ಇದರಿಂದ ಜಲಚರ ಪ್ರಾಣಿಗಳ ಉಳಿವಿಗೆ ಸಂಚಕಾರವಾಗಿದೆ.

ದೀಪಾವಳಿ ಹಬ್ಬದಲ್ಲಿ ಇತರೆಲ್ಲಾ ಹಬ್ಬಗಳಿಗಿಂತ ಅತೀ ಹೆಚ್ಚು ತ್ಯಾಜ್ಯ ಉತ್ಪತ್ತಿ ಆಗುತ್ತಿರುವುದಲ್ಲದೆ, ವಾಯುಮಾಲಿನ್ಯ, ಶಬ್ದಮಾಲಿನ್ಯ, ಜಲಮಾಲಿನ್ಯಗಳಿಗೆ ಬಹುದೊಡ್ಡ ಕೊಡುಗೆ ನೀಡುತ್ತಾ ಬಂದಿದೆ. ಸುಟ್ಟ ಪಟಾಕಿಯ ತ್ಯಾಜ್ಯವು ಭೂಮಿಗೆ ಸೇರುವುದರಿಂದ ನೂರಾರು ವರ್ಷಗಳ ನೈಸರ್ಗಿಕ ಕ್ರಿಯೆಗಳ ಫಲದಿಂದ ಆಗಿರುವ ಮಣ್ಣು ತನ್ನ ಸತ್ವವನ್ನು ಕಳೆದುಕೊಳ್ಳುತ್ತಿದೆ.

ಕೆಲವು ವರ್ಷಗಳಿಂದ ಮದುವೆಮುಂಜಿಗಳು ಮಾಲಿನ್ಯದ ಕೇಂದ್ರಗಳಾಗಿ ಬಿಟ್ಟಿವೆ. ಮದುವೆಗಳಿಗೆ ದೇವಸ್ಥಾನಗಳ ಬದಲಾಗಿ ದೊಡ್ಡದೊಡ್ಡ ಛತ್ರಗಳು ಬೇರೆ. ತಿನ್ನುವುದು ಮುಷ್ಟಿಯಷ್ಟಾದರೂ ತೋರಿಕೆಗೆ ಹಲವು ಐಟಂಗಳನ್ನು ಮಾಡಿಸುವುದು ದೊಡ್ಡಸ್ಥಿಕೆ ಅನ್ನುವುದಕ್ಕಿಂತ ಮೃಷ್ಟಾನ್ನ ಭೋಜನವು ಸಮಾರಂಭಗಳಲ್ಲಿ ಸಹಜವಾಗಿಬಿಟ್ಟಿದೆ, ಅರ್ಧದಷ್ಟು ಆಹಾರವನ್ನು ಊಟದ ಎಲೆಯ ಮೇಲೆ ತಿನ್ನಲಾರದೆ ಬಿಟ್ಟಿರುತ್ತಾರೆ.

ಜೊತೆಗೆ ಪಕ್ಕದಲ್ಲೊಂದು ಕುಡಿದುಳಿದ ನೀರಿನ ಪ್ಲಾಸ್ಟಿಕ್ ಬಾಟಲಿ, ಇಷ್ಟಕ್ಕೆ ಮುಗಿಯಿತೆ? ಇಲ್ಲ, ಬಾಡೂಟ ಬೇರೆ ಇದೆಯಲ್ಲಾ.... ಅಂದು ನೂರಾರು ಪ್ರಾಣಿಗಳ ಮಾರಣಹೋಮ, ಅಲ್ಲಿಯೂ ಲೋಡ್ ಗಟ್ಟಲೆ ತ್ಯಾಜ್ಯ ಉತ್ಪಾದನೆ, ನೀವು ಹಿರಿಯ ನಾಗರೀಕರಾಗಿದ್ದರೆ ತಿಳಿದಿರುತ್ತದೆ ಹಿಂದಿನ ಮದುವೆಗಳಲ್ಲಿ ತ್ಯಾಜ್ಯಕ್ಕೆ ಹೋಗುತ್ತಿದ್ದದ್ದು ಪೂರ್ಣವಾಗಿ ತಿಂದು, ಒಂದು ಅಗಳು ಅನ್ನವೂ ಇರದ ನೆಕ್ಕಿ ಬಿಟ್ಟ ಊಟದ ಎಲೆಗಳು ಮಾತ್ರ!

ಪ್ಲಾಸ್ಟಿಕ್ ಬಾಟಲಿಗಳಿರಲಿಲ್ಲ, ಮುತ್ತುಗದ ಎಲೆಯ ಮೇಲೆ ಬಡಿಸುತ್ತಿದ್ದ ಊಟದಲ್ಲಿ ಅನ್ನಸಾರು, ಪಲ್ಯ, ಬೂಂದಿ ಪಾಯಸ ಬಿಟ್ಟರೆ ಬೇರೆ ಏನಿತ್ತು?. ಸ್ವಚ್ಛನಗರ ಬೆಂಗಳೂರಿನಲ್ಲಿ ಪ್ರತೀ ದಿನ 3000-3500 ಟನ್ ತ್ಯಾಜ್ಯ ಉತ್ಪತ್ತಿ ಆಗುತ್ತಿದೆ. ಆಯುಧ ಪೂಜೆ ಮುಗಿದ ಮರುದಿನ 4500 ಟನ್‌ಗಳಿಗಿಂತಲೂ ಹೆಚ್ಚು ತ್ಯಾಜ್ಯವನ್ನು ಸಂಗ್ರಹಿಸುತ್ತದೆ.

ಸಾಮಾನ್ಯ ದಿನಗಳಿಗಿಂತ ಶೇ.50ರಷ್ಟು ಹೆಚ್ಚುವರಿಯಾಗಿ ಸಂಗ್ರಹಣೆ ಆಗುವುದು. ಅಗಾಧ ಪ್ರಮಾಣದ ತ್ಯಾಜ್ಯವನ್ನು ಸೂಕ್ತ ರೀತಿಯಲ್ಲಿ ಪರಿಪೂರ್ಣವಾಗಿ ವಿಲೇವಾರಿ ಮಾಡುವುದು ಜಿಬಿಎಗೆ ಬಹುದೊಡ್ಡ ಸವಾಲಿನ ಕೆಲಸ, ಆ ಕೆಲಸವನ್ನು ಯಶಸ್ವಿಯಾಗಿ ನಿರ್ವಹಣೆ ಮಾಡುತ್ತಿದೆಯಾದರೂ ಮಿತಿ ಇಲ್ಲದ ತ್ಯಾಜ್ಯದ ಉತ್ಪಾದನೆಯಿಂದ ಪೂರ್ಣವಾಗಿ ವಿಲೇವಾರಿ ಮಾಡಲಾಗುತ್ತಿಲ್ಲ.



ಎರಡು-ಮೂರು ದಿನ ಸಂಗ್ರಹಿಸದೆ ಕಸ ಹಾಕಿದಲ್ಲೇ ಉಳಿದರೆ ಇಡೀ ಬೆಂಗಳೂರು ಗಬ್ಬು ನಗರವಾಗಿ ಬಿಡುತ್ತದೆ. ನಿತ್ಯವೂ 18500 ಕ್ಕಿಂತಲೂ ಹೆಚ್ಚು ಪೌರಕಾರ್ಮಿಕರು ಸ್ವಚ್ಛತೆಯ ಯೋಧರಾಗಿ ಪೊರಕೆ ಹಿಡಿದು ಹಗಲಿರುಳು ಹೋರಾಟ ಮಾಡುತ್ತಿದ್ದಾರೆ.

ಕರ್ನಾಟಕ ಎಕನಾಮಿಕ್ಸ್ ಸರ್ವೆ 2021-22ರ ವರದಿಯ ಅನುಸಾರ ರಾಜ್ಯದಲ್ಲಿ ಸಂಗ್ರಹಿಸುವ ತ್ಯಾಜ್ಯದಲ್ಲಿ ಶೇ.53ರಷ್ಟು ಮಾತ್ರ ವಿಲೇವಾರಿ ಆಗುತ್ತಿರುವುದು. ಉಳಿದಿದ್ದು ಹಳೆಯ ತ್ಯಾಜ್ಯವಾಗಿ (ಔಭಿಜ ಠಿಥಿ) ಬೆಟ್ಟಗಳೋಪಾದಿಯಲ್ಲಿ ನಿಂತಿವೆ.

2021-22ರಂದು ರಾಜ್ಯದಲ್ಲಿ ಉತ್ಪತ್ತಿ ಆದ ತ್ಯಾಜ್ಯ 11044.30 ಟನ್, ಇದರಲ್ಲಿ ವೈಜ್ಞಾನಿಕವಾಗಿ ವಿಲೇವಾರಿ ಆಗಿದ್ದು ಕೇವಲ 5884.38 ಟನ್ ಮಾತ್ರ. ಅಂದಾಜಿಸಿರುವಂತೆ ಇಲ್ಲಿಯವರೆಗೆ ವಿಲೇವಾರಿ ಆಗದೆ ಲ್ಯಾಂಡ್‌ಫಿಲ್‌ನಲ್ಲಿ ಶೇಖರವಾಗಿರುವ ಹಳೆಯ ತ್ಯಾಜ್ಯದ ಪ್ರಮಾಣ 143.64 ಲಕ್ಷ ಮೆಟ್ರಿಕ್ ಟನ್. ದಿನದಿಂದ ದಿನಕ್ಕೆ ಏರಿಕೆ ಆಗುತ್ತಿರುವ ಪ್ರಮಾಣ ಒಂದಡೆಯಾದರೆ ಹಳೆಯದನ್ನೂ ಸೇರಿದಂತೆ ವಿಲೇವಾರಿ ಮಾಡಲಾಗದಿದ್ದರೆ ಮುಂದಿನ ಪರಿಣಾಮಗಳು ಏನಾಗಬಹುದು? ಹಾಗೂ ಇದರಿಂದ ಪ್ರಕೃತಿಯ ಮೇಲೆ ಆಗಬಹುದಾದ ದುಷ್ಪರಿಣಾಮಗಳನ್ನು ಊಹಿಸಿಕೊಳ್ಳಲಿಕ್ಕೆ ಕಷ್ಟವೆನಿಸಬಹುದು.

ಹಬ್ಬಗಳು ನಮ್ಮ ಸಂಸ್ಕೃತಿಯ ಹಿರಿಮೆ. ನಾವು ಆಚರಿಸುವ ಪ್ರತೀ ಸಮಾರಂಭಗಳು ಹಾಗೂ ಹಬ್ಬಕ್ಕೊಂದು ತನ್ನದೇ ಆದ ಅರ್ಥವಿದೆ. ಯಾವುದನ್ನೂ ನಿಲ್ಲಿಸಲಾಗದು. ಏಕೆಂದರೆ ದೇಶದ ಆರ್ಥಿಕತೆಯ ಪ್ರಶ್ನೆ, ಮೌಲ್ಯಗಳ ಉಳಿಯುವಿಕೆ, ಕುಟುಂಬಗಳ ಸಹ ಬಾಳ್ವೆ, ನಾಡಿನ ಪರಂಪರೆ, ಸುಖಶಾಂತಿ, ಸಂತೋಷ ಹಾಗೂ ಸೌಹಾರ್ದತೆಗಳ ಮೂಲ, ಮಾನವ ಜೀವನದ ಸಕಲ ಮೌಲ್ಯವು ಹಬ್ಬಗಳಲ್ಲಿ ಅಡಗಿದೆ. ಹಾಗಾಗಿ ಹಬ್ಬಗಳು ನಡೆಯಲಿಕ್ಕೇ ಬೇಕು ಮತ್ತು ಆಚರಿಸಿ ಸಂಭ್ರವಿಸಲೇಬೇಕು.

ತ್ಯಾಜ್ಯವನ್ನು ಮಿತಿಗೊಳಿಸುವ ನಿಟ್ಟಿನಲ್ಲಿ ಸುಧಾರಣಾ ಕ್ರಮಗಳನ್ನು ನಿಯಮಗಳನ್ನಾಗಿಸಿ ಜಾರಿಗೆ ತರುವುದು ಸೂಕ್ತ, ಇಲ್ಲವಾದಲ್ಲಿ ಭವಿಷ್ಯದಲ್ಲಿ ಘನಘೋರ ಪರಿಣಾಮ ಪ್ರಕೃತಿಯ ಮೇಲೆ ಆಗುವುದರಲ್ಲಿ ಸಂಶಯವಿಲ್ಲ.

ಆಶ್ಚರ್ಯವೆನಿಸುವ ಅಂಶಗಳು: ಪ್ರಪಂಚದಲ್ಲಿ ಘನ ತ್ಯಾಜ್ಯ ನಿರ್ವಹಣೆಯು ಬಹುದೊಡ್ಡ ಸವಾಲಿನ ಕೆಲಸವಾಗಿದೆ. ನಮ್ಮ ದೇಶದಲ್ಲಿ ಪ್ರತೀ ವರ್ಷ 72 ಮಿಲಿಯನ್ ಟನ್ ತ್ಯಾಜ್ಯ ಉತ್ಪತ್ತಿ ಆಗುವುದು ಅದರಲ್ಲಿ 43 ಮಿಲಿಯನ್ ಟನ್ ಮಾತ್ರ ಸಂಗ್ರಹಿಸುತ್ತಿರುವುದು.

ವೈಜ್ಞಾನಿಕವಾಗಿ ವಿಲೇವಾರಿ ಆಗುತ್ತಿರುವುದು ಕೇವಲ 12 ಟನ್, ಉಳಿದ 31 ಟನ್ ತ್ಯಾಜ್ಯವು ಲ್ಯಾಂಡ್‌ಫಿಲ್‌ನಲ್ಲಿ ಸಂಗ್ರಹವಾಗಿದೆ. ನೆನಪಿರಲಿ ಭವಿಷ್ಯದಲ್ಲಿ ಇದರ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ.

ದೇಶದಲ್ಲಿ ಲ್ಯಾಪ್‌ಟಾಪ್ ಕಂಪ್ಯೂಟರ್‌ಗಳಂತಹ ಇ-ತ್ಯಾಜ್ಯವನ್ನು ಮರುಬಳಕೆಗಾಗಿ ಪರಿಷ್ಕರಿಸುವ ಸಾಮರ್ಥ್ಯವು ವಾರ್ಷಿಕ 1.07 ಮಿಲಿಯನ್ ಟನ್, ಪ್ರತೀ ಒಂದು ಮಿಲಿಯನ್ ಟನ್ ಇ-ತ್ಯಾಜ್ಯವನ್ನು ಪರಿಷ್ಕರಿಸಿದಾಗ 14 ಕೆಜಿ ಪಲ್ಲಾಡಿಯಮ್ ಲೋಹ, 3 ಕೆಜಿ ಚಿನ್ನ, 350 ಕೆಜಿ ಬೆಳ್ಳಿ ಮತ್ತು 15875 ಕೆಜಿ ತಾಮ್ರ ಸಿಗುವುದು.

**- ಮಿರ್ಲೆ** ಚಂದ್ರಶೇಖರ

**■ ಸಣ್ಣಗಾತ್ರದ ಕಾಟು ಮಾವು ಆಗಿದ್ದರೆ, ಕನಿಷ್ಠ ನೂರು ಇರತಕ್ಕದ್ದು. ತೊಳೆದಿರಲೇ ಬೇಕೆಂದಿಲ್ಲ. ಮೊದಲು ತೊಟ್ಟು ಮುರಿಯುವ ಕೆಲಸ. ಮಾವಿನ ಕಾಯಿಯ ತೊಟ್ಟು ಮುರಿಯುವಾಗ ಅದರಿಂದ ಬೆಳ್ಳಗಿನ ಸೊನೆ ಸಿರ್‍ರನೆ ಉಕ್ಕಿ ಹಾರುತ್ತದೆ. ಉಪ್ಪಿನಕಾಯಿಗೆ ಮಿಡಿ ಆಯುವವರಿಗೆ ಈ ವಿಚಾರ ಚೆನ್ನಾಗಿ ಗೊತ್ತು. ಹಣ್ಣು ಆ ವಿಚಾರದಲ್ಲಿ ಸಾಧು. ಮತ್ತೆ ಮಾವಿನ ಹಣ್ಣಿನಲ್ಲಿ ತೊಟ್ಟು ಮತ್ತು ಓಟೆ ಮಾತ್ರವೇ ತ್ಯಾಜ್ಯ.**

# ದೇವರ ವರ, ಕಾಡುಮಾವಿನ ಮರ!

ಕಾಡುದಾರಿ

ಒಂದು ಹಣ್ಣು ತಿಂದರೆ ಸಾಕೆ? ಹಣ್ಣಿನ ರುಚಿ ನಿಮ್ಮನ್ನು ಸಂಪೂರ್ಣ ಆವರಿಸಿಕೊಳ್ಳಬೇಕೆಂದರೆ ಹತ್ತಾದರೂ ತಿನ್ನಬೇಕು. ಕಾಟುಮಾವು ಕನಿಷ್ಠ ಇಪ್ಪತ್ತು. ಹಣ್ಣಿನ ರಸ ಕೈಯನ್ನೆಲ್ಲ ಒದ್ದೆಯಾಗಿಸಿ, ಮಣಿಕಟ್ಟನ್ನು ಹಾದು, ಮೊಣಕೈಯವರೆಗೂ ಇಳಿಯ ಬೇಕು. ಆಗ ಕೈಯನ್ನು ಮೊಣಕೈಯಿಂದ ಅಂಗೈವರೆಗೂ ಸು...ರ್‍ರನೆ ಆಗಾಗ ನೆಕ್ಕಿಕೊಳ್ಳಬೇಕು.

ನಡುಬೇಸಿಗೆಯಲ್ಲಿ ಮಲೆನಾಡಿನ ಗದ್ದೆ ಬದು, ತೋಟದ ಬದಿ, ಹೊಳೆಯಂಚು, ಕಾಡಿನ ನಡುವೆ ಬೆಳೆದು ಉದ್ದ ಉದ್ದಕ್ಕೆ ನಿಂತ ಕಾಡುಮಾವಿನ ಮರದ ಕೆಳಗೆ ನಿಂತೋ ಕುಳಿತೋ ಧ್ಯಾನ ಮಾಡುವ ಸುಖ ನಿಮಗೆ ಗೊತ್ತೆ? ಈ ಧ್ಯಾನದಲ್ಲಿ ಯಾವ ದೇವರೂ ಸುಂದರಿಯೂ ಇರುವುದಿಲ್ಲ. ಬದಲು ಪುಷ್ಕಳವಾಗಿ ಬೆಳೆದು, ಅಲ್ಲಲ್ಲಿ ತುಸು ಹಳದಿ ಬಣ್ಣಕ್ಕೆ ತಿರುಗಿದ ಗಾಢ ಹಸಿರಿನ ಮಾವು ಮೇಲಿನಿಂದ ತೊಟ್ಟು ಕಳಚಿ ಯಾವಾಗ ಧರೆಗೆ ಉದುರುತ್ತದೆ ಎಂಬುದೊಂದೇ. ಕತ್ತೆತ್ತಿದರೆ, ಆಕಾಶದವರೆಗೂ ಬೆಳೆದು ನಿಂತ ಆ ಮರದಲ್ಲಿ ಹಣ್ಣುಗಳೇ ಕಾಣಿಸವು. ಆದರೆ, ಜೋರಾಗಿ ಗಾಳಿ ಬೀಸಿದಾಗೊಮ್ಮೆ ಫಟ್-ಫಟ್ ಎಂದು ನೆಲಕ್ಕುದುರುವ ಈ ಹಣ್ಣುಗಳ ತೊಟ್ಟಿನಲ್ಲಿ ಆಗತಾನೆ ಬಿಟ್ಟ ಸೊನೆ ಹನಿಯಾಗಿರುತ್ತದೆ. ಅದಕ್ಕೆ ಅದರದೇ ಸೆಳೆಯುವ ಪರಿಮಳ.

ಈ ಹಣ್ಣನ್ನು ತಿನ್ನುವ ಬಗೆ ವಿಧವಿಧ. ಹಾಗೇ ತೊಟ್ಟು ಕಚ್ಚಿ ತುಂಡು ಮಾಡಿ ಎಸೆದು, ತುಟಿ ದುಂಡಗೆ ಮಾಡಿ ಒಳಗಿನ ತಿರುಳನ್ನು ಹೀರಿ ಬಾಯಿಗೆ ತುಂಬಿಸಿಕೊಳ್ಳುವುದು ಉತ್ತಮ. ಸಿಪ್ಪೆಯನ್ನು ಹಲ್ಲಿನಿಂದ ಎಳೆದು ಬಿಡಿಸಿ ಅದಕ್ಕೆ ಅಂಟಿಕೊಂಡಿರುವ ತಿರುಳನ್ನು ಸೀಪಿ, ನಂತರ ಗೊರಟನ್ನು ಆಮೂಲಾಗ್ರವಾಗಿ ಸೀಪುವುದು ಮಧ್ಯಮ.

ಚೂರಿಯಿಂದ ಕತ್ತರಿಸಿ ಹೋಳು ಮಾಡಿ ತಿನ್ನುವುದು ಅಧಮ. ಮೊನ್ನೆ ಯಾರದೋ ಮನೆಗೆ ಹೋಗಿದ್ದೆ. ನೀಟಾಗಿ ಕತ್ತರಿಸಿದ್ದ ಮಾವಿನ ಹೋಳುಗಳನ್ನು ತಟ್ಟೆಯಲ್ಲಿಟ್ಟು ತಂದು ಒಳ್ಳೆ ರಸಪುರಿ ಮಾರಾಯರೆ, ತಿನ್ನಿ ಎಂದು ಮುಂದಿಟ್ಟರು. ಆಯತ ಮತ್ತು ಚೌಕಾಕಾರದ ಆ ತುಂಡುಗಳ ಜತೆಗೆ ಫೋರ್ಕು. ಅವರ ಮಕ್ಕಳು ನಾಜೂಕಾಗಿ ಹೋಳನ್ನು ಫೋರ್ಕಿನಲ್ಲಿ ಎತ್ತಿಕೊಂಡು ತುಟಿಗಳಿಗೆ ತಾಗದಂತೆ ಬಾಯಿಗೆಸೆದುಕೊಂಡು ಎದ್ದು ಹೋದರು. ಅದನ್ನು ನೋಡಿ ಬದುಕಿನ ಮೇಲೆಯೇ ಜಿಗುಪ್ಸೆ ಉಕ್ಕಿ ಬಂತು.

ಮಾವಿನ ಹಣ್ಣನ್ನು ಹೀಗೂ ತಿನ್ನುವ ಪಾಖಂಡಿಗಳುಂಟೇ? ಪಪ್ಪಾಯಿಯನ್ನು ಹೀಗೆ ತಿಂದರೆ ಸಮ. ಉಳಿದ ಹಣ್ಣುಗಳ ಕತೆ ಏನೇ ಇರಲಿ. ಮಾವಿನ ಹಣ್ಣನ್ನು ತಿನ್ನಬೇಕಾದ ರೀತಿಯೇ ಬೇರೆ. ಚಮಚ, ಫೋರ್ಕುಗಳನ್ನು ಇದರ ಜತೆ ಜೋಡಿಸುವುದು ಹೀನಾಯ. ಮಾವು ಯಾವುದೇ ಜಾತಿಯದಾಗಿರಲಿ, ಅದನ್ನು ಬುಟ್ಟಿಯಲ್ಲಿಯೇ ತಂದಿಡಬೇಕು.

ಸಣ್ಣಗಾತ್ರದ ಕಾಟು ಮಾವು ಆಗಿದ್ದರೆ, ಕನಿಷ್ಠ ನೂರು ಇರತಕ್ಕದ್ದು. ತೊಳೆದಿರಲೇ ಬೇಕೆಂದಿಲ್ಲ, ಮೊದಲು ತೊಟ್ಟು ಮುರಿಯುವ ಕೆಲಸ. ಮಾವಿನ ಕಾಯಿಯ ತೊಟ್ಟು ಮುರಿಯುವಾಗ ಅದರಿಂದ ಬೆಳ್ಳಗಿನ ಸೊನೆ ಸಿರ್‍ರನೆ ಉಕ್ಕಿ ಹಾರುತ್ತದೆ. ಉಪ್ಪಿನಕಾಯಿಗೆ ಮಿಡಿ ಆಯುವವರಿಗೆ ಈ ವಿಚಾರ ಚೆನ್ನಾಗಿ ಗೊತ್ತು. ಹಣ್ಣು ಆ ವಿಚಾರದಲ್ಲಿ ಸಾಧು. ಮತ್ತೆ ಮಾವಿನ ಹಣ್ಣಿನಲ್ಲಿ ತೊಟ್ಟು ಮತ್ತು ಓಟೆ ಮಾತ್ರವೇ ತ್ಯಾಜ್ಯ.

ಉಳಿದದ್ದೆಲ್ಲ ಭೋಜ್ಯ.ಗೊರಟು ಅಲಿಯಾಸ್ ಸಿಪ್ಪೆಯಲ್ಲಿ ತಿರುಳನ್ನು ಬಿಡುವವನು ಪಾಪಿ. ಗೊರಟನ್ನು ಚೀಪಿ ಕಚ್ಚಿ ಹೀರಿ ಓಟೆಯನ್ನು ದಿಟ್ಟಿಸಬೇಕು. ಆಗ ಅದು ನಿನ್ನ ದಮ್ಮಯ್ಯ, ಇನ್ನು ಸಾಕು ಮಾರಾಯ ಬಿಡು ಎಂದು ಅಂಗಲಾಚಿದರೆ ಅದಕ್ಕೆ ಬಿಡುಗಡೆ ಕೊಡಬಹುದು ಎಂದರ್ಥ. ಆಗಲೂ ಹಾಗೇ ಅದನ್ನು ಬಿಸಾಡುವಂತಿಲ್ಲ.

ನಿಮ್ಮ ತಮ್ಮನೋ ತಂಗಿಯೋ ಹತ್ತಿರದಲ್ಲಿದ್ದರೆ ಅವರನ್ನು ಕರೆದು, ಅವರು ಓ ಎಂದರೆ, ಹಾಗಿದ್ದರೆ ಓಟೆ ಜತೆ ಓಡು ಎಂದು ಅದನ್ನು ದೂರ ಬಿಸಾಕಿ ಅವರನ್ನು ಕೊರಂಟು ಮಾಡುವ ಸೀನು ಸೃಷ್ಟಿಸಬೇಕು. ಅಲ್ಲಿಗೆ ಆಮ್ರಾಸ್ವಾದನದ ಒಂದು ಅಧ್ಯಾಯ ಸಂಪೂರ್ಣ.

ಅಂದ ಹಾಗೆ ಓಟೆಯನ್ನು ಒಡೆದರೆ ಒಳಗೆ ಇರುವ ಬಿಳಿಯ ಭಾಗಕ್ಕೆ ಮಲೆನಾಡಿನಲ್ಲಿ ಕೋಗಿಲೆ ಎನ್ನುತ್ತಾರೆ. ಯಾಕೆ ಆ ಹೆಸರೋ ತಿಳಿಯದು. ಒಂದು ಹಣ್ಣು ತಿಂದರೆ ಸಾಕೆ? ಹಣ್ಣಿನ ರುಚಿ ನಿಮ್ಮನ್ನು ಸಂಪೂರ್ಣ ಆವರಿಸಿಕೊಳ್ಳಬೇಕೆಂದರೆ ಹತ್ತಾದರೂ ತಿನ್ನಬೇಕು. ಕಾಟುಮಾವು ಕನಿಷ್ಠ ಇಪ್ಪತ್ತು.

ಹಣ್ಣಿನ ರಸ ಕೈಯನ್ನೆಲ್ಲ ಒದ್ದೆಯಾಗಿಸಿ, ಮಣಿಕಟ್ಟನ್ನು ಹಾದು, ಮೊಣಕೈಯವರೆಗೂ ಇಳಿಯಬೇಕು. ಆಗ ಕೈಯನ್ನು ಮೊಣಕೈಯಿಂದ ಅಂಗೈವರೆಗೂ ಸು...ರ್‍ರನೆ ಆಗಾಗ ನೆಕ್ಕಿ ಕೊಳ್ಳಬೇಕು. ಹಣ್ಣೆಲ್ಲ ತಿಂದಾದ ನಂತರ ಹಲ್ಲುಗಳೆಡೆಯಲ್ಲಿ ಸಿಕ್ಕಿಕೊಂಡ ನಾರನ್ನು ಬಿಡಿಸುವ ಕಾರ್ಯಕ್ರಮ. ಸಾಮಾನ್ಯವಾಗಿ ಒಂದು ಕಂಬಳಿ ಹೆಣೆಯುವಷ್ಟು ನಾರು ಅಲ್ಲಿ ಸಿಕ್ಕಿಕೊಂಡಿದ್ದರೆ ಮಾತ್ರ ನೀವು ಮಾವು ತಿನ್ನುವುದರಲ್ಲಿ ಪಂಟರ್ ಎಂದರ್ಥ.

ಹಾಗೆ ಹಣ್ಣು ಮುಕ್ಕುತ್ತಿದ್ದ ಬಾಲ್ಯದ ಮುಂಜಾನೆಗಳು ನೆನಪಾಗುತ್ತವೆ. ಯಾವತ್ತೂ ಎಂಟು ಗಂಟೆಗೆ ಮುನ್ನ ಎದ್ದೇಳದ ನಮ್ಮನ್ನು ಬೇಸಿಗೆಯಲ್ಲಿ ಬೇಗನೆ ಏಳಿಸಲು ದೊಡ್ಡವರು ಕಂಡುಕೊಂಡ ಉಪಾಯ: ಜೀರಿಗೆ ಮಾವಿನ ಹಣ್ಣು ಆಚೆ ಮನೆಯವ್ರ ಪಾಲಾಯ್ತಾ ಅಂತ! ಹಾಸಿಗೆಯಿಂದ ಚಂಗನೆ ನೆಗೆದು ಎರಡೇ ಗುತ್ತಿನಲ್ಲಿ ಮಾವಿನ ಮರದ ಬುಡಕ್ಕೆ ಧಾವಿಸುತ್ತಿದ್ದೆವು.

ಹಿಂದಿನ ರಾತ್ರಿ ಚೆನ್ನಾಗಿ ಗಾಳಿ ಬೀಸಿದ್ದರೆ ಮರದಡಿ ರಂಗೋಲಿ ಹಾಕಿದಂತೆ ಹಣ್ಣುಗಳು. ಅದು ಇನ್ನೊಬ್ಬರ ಪಾಲಾಗುವ ಮುನ್ನವೇ ಹೆಕ್ಕಿಕೊಳ್ಳಬೇಕು. ಕೆಲವೊಮ್ಮೆ ಮಾವಿನ ಮರದಡಿಯೇ ಮೂರನೇ ಮಹಾಯುದ್ಧ. ಮಕ್ಕಳು ಬೆಳಗ್ಗೆದ್ದು ಕಾಡುಬಿದ್ದರೆ ಸಂಜೆಯವರೆಗೂ ಮಾವಿನಹಣ್ಣುಗಳೇ ನಮ್ಮ ಜೀವ ಪೊರೆಯುತ್ತಿದ್ದವು.



ಈಗಲೂ ಹಾಗೇ ತಿನ್ನುವ ಆಸೆಯಾಗುತ್ತದೆ. ಬೈಬಲ್ ಮನುಷ್ಯನ ಸೃಷ್ಟಿಯ ಬಗ್ಗೆ ಹೇಳುವ ಈ ಕತೆ ನಿಮಗೆ ಗೊತ್ತಿರಬಹುದು-ದೇವರು ಮೊದಲು ಆದಂನನ್ನೂ ಆಮೇಲೆ ಈವ್‌ಳನ್ನೂ ಸೃಷ್ಟಿಸಿದ. ಬಳಿಕ ಮರವೊಂದನ್ನು ತೋರಿಸಿ, ಅದರಲ್ಲಿರುವುದು ನಿಷೇಧಿತ ಫಲವೆಂದೂ ಅದನ್ನು ತಿನ್ನಬಾರದೆಂದೂ ಹೇಳಿ, ಅವರನ್ನು ದೇವರ ಉದ್ಯಾನದಲ್ಲಿ ಆಡಲು ಬಿಟ್ಟ. ಆದರೆ ಆದಂ ಮತ್ತು ಈವ್ ಅದನ್ನು ದೇವರ ಕಣ್ಣು ತಪ್ಪಿಸಿ ತಿಂದೇ ಬಿಟ್ಟರು.

ಮುಗ್ಧತೆಯ ಸಾಕಾರಮೂರ್ತಿಗಳಾಗಿದ್ದ ಅವರಿಗೆ ಆ ಮೊದಲು ಪ್ರಣಯದ ಅರಿವಿರಲಿಲ್ಲ. ಹಣ್ಣು ತಿಂದದ್ದೇ, ನಾಚಿಕೆ, ಪ್ರೇಮ, ಕಾಮ ಮುಂತಾದ ಮನುಷ್ಯ ಸಹಜ ಭಾವಗಳು ಹುಟ್ಟಿ ಕೊಂಡವು. ಸೃಷ್ಟಿ ಮೊದಲಾಯಿತು.

ಬೈಬಲ್ ಹೇಳುವ ಈ ಆದಿಫಲ ಯಾವುದಿರಬಹುದು ಎಂಬ ಅನುಮಾನ ನನ್ನನ್ನು ಪದೇ ಪದೇ ಕಾಡಿದೆ. ಇತ್ತೀಚೆಗೆ ಆ ಸಂಶಯ ಪರಿಹಾರವಾಯ್ತು. ನಮ್ಮ ಪರಿಚಯದ ಆಯುರ್ವೇದ ವೈದ್ಯರೊಬ್ಬರು ಒಂದು ಶ್ಲೋಕವನ್ನು ಉಲ್ಲೇಖಿಸಿ ಅದರ ಅರ್ಥವನ್ನು ಹೀಗೆ ವಿವರಿಸಿದರು: ಪಕ್ವಂತು ಮಧುರಂ ವೃಷ್ಯಂ ಸ್ನಿಗ್ಧ ಹೃದ್ಯಂ ಬಲಪ್ರದಂ, ಗುರು ವಾತಹರಮ್ ರುಚ್ಯಂ ವರ್ಣ್ಯಂ ಶೀತಮಪಿತ್ತಲಮ-ಮಾವಿನ ಹಣ್ಣು ಎಷ್ಟು ಒಳ್ಳೇದು ಗೊತ್ತಾ? ಚೆನ್ನಾಗಿ ಹಣ್ಣಾದ ಮಾವು ಮಧುರ ಅಂದ್ರೆ ರುಚಿಕರ, ಸ್ನಿಗ್ಧ ಅಂದ್ರೆ ರಸವತ್ತಾದದ್ದು, ಹೃದ್ಯ ಅಂದ್ರೆ ಹೃದಯಕ್ಕೊಳ್ಳೇದು, ರುಚಿ ಮತ್ತು ವರ್ಣವನ್ನು ಉದ್ದೀಪಿಸುವಂಥದ್ದು, ಬಲಪ್ರದ ಮತ್ತು ವಾತಹರ, ಶೀತವೂ ಅಲ್ಲ ಪಿತ್ತವೂ ಅಲ್ಲದ್ದು. ವೃಷ್ಯ ಅಂದ್ರೆಂತದು ಗೊತ್ತುಂಟ? ವೀರ್ಯವೃದ್ಧಿ ಮಾಡುವಂಥದ್ದು ಅಂತ! ಮಾವಿನ ಈ ವೃಷ್ಯ ಗುಣದ ಪರಿಣಾಮವೇ ಆದಂ ಮತ್ತು ಈವ್‌ರ ಪ್ರಣಯಪ್ರಸಂಗ ಶುರುವಾಗಲು ಕಾರಣ ಎಂದು ನಾನು ಊಹಿಸುತ್ತೇನೆ.

ಉರ್ದು ಕವಿ ಮಿರ್ಜಾ ಗಾಲಿಬ್‌ನ ಮಾವು ಪ್ರೇಮ ಜನಜನಿತ. ಇವನು ರಾಶಿ-ರಾಶಿ ಮಾವಿನ ಹಣ್ಣು ಸವಿಯುತ್ತಿದ್ದ. ಒಮ್ಮೆ ಈತ ಗೆಳೆಯ ರಜಿಯುದ್ದೀನ್ ಖಾನ್ ಜತೆ ಮನೆ ಮುಂದೆ ಕುಳಿತಿದ್ದ. ಬೀದಿಯಲ್ಲಿ ಮಾವಿನ ಹಣ್ಣಿಗೆ ಗೊರಟು, ಸಿಪ್ಪೆ ಬಿದ್ದಿದ್ದವು. ಅಂದು ಕತ್ತೆ ಅಡ್ಡಾಡುತ್ತ ಬಂತು. ಮಾವಿನ ಹಣ್ಣನ್ನು ಮೂಸಿ, ತಿನ್ನದೆ ಹಾಗೇ ಹೋಯಿತು. ಅದನ್ನು ನೋಡಿ, ಗಾಲಿಬ್‌ನನ್ನು ಚುಡಾಯಿಸಲೆಂದು ರಜಿಯುದ್ದೀನ್ ಖಾನ್ ಹೇಳಿದ:



ನೋಡು ಗಾಲಿಬ್, ಕತ್ತೆ ಕೂಡ ಮಾವಿನ ಹಣ್ಣು ತಿನ್ನಲ್ಲ! ಥಟ್ಟಂತ ಬಂತು ಗಾಲಿಬ್‌ನ ಉತ್ತರ: ಹೌದು, ಕತ್ತೆಗಳು ಮಾತ್ರ ಮಾವಿನ ಹಣ್ಣು ತಿನ್ನಲ್ಲ. ಮಾವಿನ ಹಣ್ಣನ್ನು ತಿನ್ನದವರು, ಅದನ್ನು ದ್ವೇಷಿಸುವವರು ಈ ಪ್ರಸಂಗ ಓದಿ ಆತ್ಮಾವಲೋಕನ ಮಾಡಿಕೊಳ್ಳಬೇಕು.

ಮಾವು ಎಂದ ಕೂಡಲೆ ಮನಸ್ಸು ಕಾಳಿದಾಸನ ಮೇಘದೂತಕ್ಕೇ ಮೊರೆ ಹೋಗುತ್ತದೆ. ಆತನ ಪದ್ಯವನ್ನು ದ.ರಾ.ಬೇಂದ್ರೆಯವರು ಹೀಗೆ ಪುನರ್ ಸೃಷ್ಟಿಸುತ್ತಾರೆ: ತೊಳೆದ ತುರುಬು ಕಪ್ಪಾದ ನೀನು/ ಗಿರಿಶಿಖರದಲ್ಲಿ ತೇಲೆ/ ಆಷಾಢ ಮಾವು ಸುರಿದಾವು ಗೊಂಚಲಲಿ/ ಬೆಟ್ಟದೆದೆಯ ಮೇಲೆ/ ಅಮರ ಮಿಥುನಗಳ ಪ್ರಣಯದೃಷ್ಟಿ/ ಅರಳರಳುವಂತೆ ಆಗೆ/ ಮಲೆಯ ತುದಿಯು ಕಪ್ಪಾಗಿ/ ತೋರುವದು ನೆಲದ ಮೊಲೆಯ ಹಾಗೆ! ಆಮ್ರಕೂಟ ಬೆಟ್ಟದ ಮೇಲುಗಡೆ ತಂಗುವ ಮೋಡ, ಬೆಟ್ಟದ ತಪ್ಪಲ ತುಂಬಾ ಹಬ್ಬಿರುವ ಫಲಭರಿತ ಮಾವಿನ ತೋಪಿನ ಹಿನ್ನೆಲೆಯಲ್ಲಿ, ಆಕಾಶದಿಂದ ನೋಡುತ್ತಿರುವ ಅಮರಮಿಥುನಕ್ಕೆ ಕಾಣಿಸುವುದು ಹಾಗಂತೆ.

ಈ ಸಾಲುಗಳನ್ನು ಓದಿದಾಗ ಅದರ ಉಪಮಾ ಸಾಮರ್ಥ್ಯ, ಚಿತ್ರಕ ಶಕ್ತಿಯನ್ನು ಕಂಡು ರೋಮಾಂಚನವಾಗದೆ ಇರದು. ಈ ಮೈನವಿರಿನ ನಿತ್ಯನೂತನತೆ ಬರಿಯ ಕಾಳಿದಾಸನಲ್ಲಿಲ್ಲ, ಬೇಂದ್ರೆಯಲ್ಲಿಲ್ಲ, ಮಾವು ಎಂಬ ಮಾಂತ್ರಿಕ ಫಲದಲ್ಲಿಯೂ ಇದೆ ಅನ್ನಿಸುವುದುಂಟು.

ನಾವು ಹೆಮ್ಮೆ ಪಡಬಹುದಾದ್ದು ಏನೆಂದರೆ, ಮಾವು ನಮ್ಮ ಸ್ವಂತದ್ದು ಎಂಬುದು. ನಾವು ಜಗತ್ತಿಗೆ ಸೊನ್ನೆ ಕೊಟ್ಟಂತೆ ಮಾವನ್ನೂ ಕೊಟ್ಟೆವು. ಅದಕ್ಕೆ ಇದರ ಹೆಸರು ಸಸ್ಯಶಾಸ್ತ್ರೀಯ ಹೆಸರು ಮ್ಯಾಂಜಿ ಫೆರಾ ಇಂಡಿಕಾ. ಇಂದಿಗೂ ಜಗತ್ತಿನ ಮಾವು ಉತ್ಪಾದನೆಯಲ್ಲಿ ಅರ್ಧ ಭಾಗ ಭಾರತದ್ದೆ. ಮೊದಲು ಇಲ್ಲಿ ಕಾಡು ಮಾವಿನ ಹಣ್ಣಿನ ವೈವಿಧ್ಯವಿತ್ತು.

ಮೊಘಲರು ಮತ್ತು ವಿದೇಶೀಯರು ಇಲ್ಲಿನ ಮಾವಿಗೆ ನಾನಾ ಬಗೆಯ ಕಸಿಯನ್ನು ಮಾಡಿ ದೊಡ್ಡ ಜಾತಿಯ ವೈವಿಧ್ಯಮಯ ಹಣ್ಣುಗಳನ್ನು ಸೃಷ್ಟಿಸಿದರು. ಕಾಡು ಮಾವುಗಳು ಮಾಯವಾದವು. ಆದರೆ ಒಳ್ಳೆಯ ಮಿಡಿ ಉಪ್ಪಿನಕಾಯಿಗೆ ಈಗಲೂ ಸಣ್ಣ ಕಾಡು ಮಾವೇ ಬೇಕು. ಅಪ್ಪೆ ಮಿಡಿಯೂ ಒಂದು ಬಗೆಯ ಕಾಡುಮಾವು. ಧನಿಯಾ, ಜೀರಿಗೆ- ಹೀಗೆ ಅದರ ಪರಿಮಳಕ್ಕನುಸರಿಸಿ ನಾನಾ ಹೆಸರುಗಳು.

ಹೊಸ ತಲೆಮಾರಿಗೆ ಬಹುಶಃ ಕಾಡುಮಾವು ಸವಿದು ಗೊತ್ತೇ ಇಲ್ಲ ಎನ್ನಬಹುದೋ ಏನೋ. ಯಾಕೆಂದರೆ ಪೇಟೆಯಲ್ಲಿ ಆಲ್ಫೋನ್ಸೋ, ರಸಪುರಿ, ಬಾದಾಮಿ ಮೊದಲಾದ ರುಚಿಕರ ಕಸಿ ಹಣ್ಣುಗಳು ಸಿಗುತ್ತವೆ. ಕತ್ತರಿಸಿ ತಿನ್ನಲು ಸುಲಭ, ನೋಡಲೂ ಚಂದ. ಇದರ ನಡುವೆ, ಕಾಡಿನ ಬೆಳೆಯುವ ಮರದ ಹಣ್ಣುಗಳು ಹೇಗೆ ತಾನೆ ಸ್ಥಾನ ಪಡೆಯಬೇಕು. ಅದು ಕಾಡು ಪ್ರಾಣಿಗಳಿಗೇ ಇರಲಿ, ಪರವಾಗಿಲ್ಲ.

ಆದರೆ ನಮಗೂ ಆಗಾಗ ಸಿಗಲಿ. ಆಕಾಶದೆತ್ತರಕ್ಕೆ ಬೆಳೆಯುವ ಕಾಡುಮಾವಿನ ಮರದಿಂದ ಹಣ್ಣನ್ನು ಕೊಯ್ಯುವುದು ಬಲುಕಷ್ಟ. ಅದು ಕರುಣಿಸಿ ಬೀಳಿಸಿದಾಗ ಮಾತ್ರ ನಮಗೆ ಫಲಪ್ರಾಪ್ತಿ. ಆ ದೃಷ್ಟಿಯಿಂದ ಅದು ದೇವರ ಹಾಗೆ.


**- ಹರೀಶ್** ಕೇರ

# ಜಪಾನಿಯರ ಹೆಸರುಗಳು

ಸಂಪಾದಕರ ಸದ್ಯಶೋಧನೆ

ಜಪಾನಿನ ಭಾಷೆ ಮತ್ತು ಆಹಾರದಂತೆ ಅಲ್ಲಿಗೆ ಹೋದಾಗ ವ್ಯಕ್ತಿಗಳ ಹೆಸರನ್ನು ಹೇಳಲು ಆಗದೇ ತಡವರಿಸುವುದುಂಟು. ವ್ಯಕ್ತಿಗಳು ಮತ್ತು ಅವರ ಹೆಸರುಗಳನ್ನು ನೆನಪಿಟ್ಟುಕೊಳ್ಳುವುದು ಮತ್ತು ಅರ್ಥಮಾಡಿಕೊಳ್ಳುವುದು ಅಷ್ಟೇನೂ ಸುಲಭವಲ್ಲ.

ಮೊದಲು ಅಲ್ಲಿಗೆ ಹೋದಾಗ, ಸುಜುಕಿ ಮತ್ತು ನಕಮುರಾ ಎಂಬ ಹೆಸರಿನವರೇ ಹೆಚ್ಚಿನವರು ಸಿಕ್ಕರೆ, ಎಲ್ಲರ ಹೆಸರುಗಳೂ ಹಾಗೇ ಎಂದು ಭಾವಿಸಬೇಕಿಲ್ಲ. ಜಪಾನಿ ಸಂಸ್ಕೃತಿಯು ಪ್ರಾಚೀನತೆಯೊಂದಿಗೆ ನಾವೀನ್ಯದ ಸಮನ್ವಯವನ್ನು ತೋರಿಸುವ ವಿಶಿಷ್ಟ ದೇಶವಾಗಿರುವಂತೆ, ಜಪಾನಿಯರ ಹೆಸರುಗಳು ಕೂಡ ಸಂಸ್ಕೃತಿ, ಪರಂಪರೆ ಮತ್ತು ಅರ್ಥಪೂರ್ಣತೆಯ ಪ್ರತಿರೂಪವಾಗಿವೆ. ಪ್ರತಿಯೊಬ್ಬ ವ್ಯಕ್ತಿಯ ಹೆಸರಿನ ಹಿಂದೆಯೂ ಒಂದು ಕಥೆ, ಒಂದು ಅರ್ಥ ಮತ್ತು ಒಂದು ನುಡಿ ಮುತ್ತು ಇರುವಂತಿದೆ. ಜಪಾನಿನಲ್ಲಿ ಸಾಮಾನ್ಯವಾಗಿ ವ್ಯಕ್ತಿಯ ಹೆಸರಿನಲ್ಲಿ ಎರಡು ಅಂಶಗಳಿರುತ್ತವೆ. ಮೊದಲನೆಯದು, ಕುಟುಂಬದ ಹೆಸರು ಮತ್ತು ಎರಡನೆಯದು, ವೈಯಕ್ತಿಕ ಹೆಸರು. ಉದಾಹರಣೆಗೆ, ಸಾಕುರಾ ತಾನಾಕಾ ಎಂಬ ಹೆಸರಿನಲ್ಲಿ ತಾನಾಕಾ ಕುಟುಂಬದ ಹೆಸರು ಆಗಿದ್ದು, ಸಾಕುರಾ ವ್ಯಕ್ತಿಯ ಹೆಸರು. ಜಪಾನಿ ಭಾಷೆಯಲ್ಲಿ ಹೆಸರು ಬರೆಯುವಾಗ ಸಾಮಾನ್ಯವಾಗಿ ಕುಟುಂಬದ ಹೆಸರನ್ನು ಮೊದಲು ಬರೆಯುತ್ತಾರೆ ಮತ್ತು ನಂತರ ವೈಯಕ್ತಿಕ ಹೆಸರನ್ನು. ಜಪಾನಿ ಭಾಷೆಯಲ್ಲಿ ಮೂರು ಮುಖ್ಯ ಲಿಪಿಗಳನ್ನು ಬಳಸಲಾಗುತ್ತದೆ. ಚೀನಿ ಮೂಲದ ಲಿಪಿ ಕಾಂಜಿ, ಜಪಾನಿ ಮೂಲದ ಶಬ್ದಲಿಪಿ ಹಿರಾಗಾನ ಮತ್ತು ವಿದೇಶಿ ಶಬ್ದಗಳನ್ನು ಬರೆಯಲು ಬಳಸುವ ಲಿಪಿ ಕಟಕಾನ. ಹೆಸರಿನಲ್ಲಿ ಹೆಚ್ಚು ವೇಳೆ ಕಾಂಜಿ ಅಕ್ಷರಗಳನ್ನೇ ಬಳಸಲಾಗುತ್ತದೆ. ಏಕೆಂದರೆ ಪ್ರತಿ ಕಾಂಜಿ ಅಕ್ಷರಕ್ಕೂ ತನ್ನದೇ ಆದ ಅರ್ಥವಿದೆ. ಒಂದು ಹೆಸರಿನಲ್ಲಿ ಬಳಸುವ ಕಾಂಜಿಗಳು ವ್ಯಕ್ತಿಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವಂತೆ ಆಯ್ಕೆ ಮಾಡಲಾಗುತ್ತವೆ. ಜಪಾನಿ ಹೆಸರುಗಳಿಗೆ ಅರ್ಥ ಮತ್ತು ಸಂಕೇತಗಳಿವೆ.




ಉದಾಹರಣೆಗೆ, ಹರು ಅಂದ್ರೆ ವಸಂತ ಋತು, ಕೈ ಅಂದ್ರೆ ಸಮುದ್ರ, ಯುಕಿ ಅಂದ್ರೆ ಹಿಮ, ಹಾನಾ ಅಂದ್ರೆ ಹೂವಿನ ನೆಲ. ಹೆಸರಿನಲ್ಲಿ ಎರಡು ಅಥವಾ ಹೆಚ್ಚು ಕಾಂಜಿ ಅಕ್ಷರಗಳನ್ನು ಬಳಸಿದರೆ, ಅವು ಒಟ್ಟಾಗಿ ಹೊಸ ಅರ್ಥವನ್ನೂ ನೀಡಬಹುದು.

ಉದಾಹರಣೆಗೆ, ಹಾರೂಕಿ ಹೆಸರಿನಲ್ಲಿ ಹಾರು (ವಸಂತ) + ಕಿ (ಮರ)= ವಸಂತದ ಮರ. ಜಪಾನಿನಲ್ಲಿ ಹೆಸರನ್ನು ಎಷ್ಟೊಂದು ಅರ್ಥಪೂರ್ಣವಾಗಿ ಆಯ್ಕೆ ಮಾಡಲಾಗುತ್ತದೋ, ಅಷ್ಟೇ ಮುಖ್ಯವಾಗಿ ಅದು ಶುಭ ಸಂಕೇತವಾಗಿರುವಂತೆ ನೋಡಿಕೊಳ್ಳುತ್ತಾರೆ. ಅನೇಕ ಪೋಷಕರು ತಮ್ಮ ಮಕ್ಕಳಿಗೆ ಪ್ರಕೃತಿ, ನದಿ, ನೀರು, ಭೂಮಿ, ಮರ, ಪ್ರೀತಿ, ಸಾಮರ್ಥ್ಯ, ಶಾಂತಿ, ಅಥವಾ ಯಶಸ್ಸಿನ ಸಂಕೇತಗಳಿರುವ ಹೆಸರುಗಳನ್ನು ಆಯ್ಕೆ ಮಾಡುತ್ತಾರೆ. ಪ್ರತಿಯೊಂದು ದಶಕದಲ್ಲಿಯೂ ಜನಪ್ರಿಯ ಹೆಸರಗಳು ಬದಲಾಗುತ್ತವೆ. ಉದಾಹರಣೆಗೆ, 2020ರ ದಶಕದಲ್ಲಿ ಪುರುಷರ ಹೆಸರುಗಳಾದ ಹಾರುಕಿ, ಸೋಟಾ, ರೀನ್, ಹಿನಾಟೋ ಜನಪ್ರಿಯವಾಗಿದ್ದರೆ, ಮಹಿಳೆಯರ ಹೆಸರುಗಳಾದ ಹಾನಾ, ಯುಜು, ಐ, ಹೋನೋಕಾ ಮುಂತಾದ ಹೆಸರುಗಳು ಜನಪ್ರಿಯವಾಗಿದ್ದವು. ಜಪಾನಿನಲ್ಲಿ ಸುಮಾರು ಲಕ್ಷಕ್ಕೂ ಹೆಚ್ಚು ವಿಭಿನ್ನ ಕುಟುಂಬ ಹೆಸರಗಳಿವೆ. ಇವು ಬಹುಪಾಲು ಪ್ರಕೃತಿ ಅಥವಾ ಭೌಗೋಳಿಕ ಅಂಶಗಳ ಮೇಲೆ ಆಧಾರಿತವಾಗಿವೆ. ಉದಾಹರಣೆಗೆ, ತಾನಾಕಾ (ತೋಟದ ಮಧ್ಯೆ), ಯಾಮಾಮೋಟೋ (ಪರ್ವತದ ತಳಭಾಗ), ಕಾವಾ ಮುರಾ (ನದಿಯ ಹಳ್ಳಿ), ಇಶಿಕಾವಾ (ನದಿ ತೀರ). ಈ ಹೆಸರುಗಳಿಂದ ವ್ಯಕ್ತಿಯ ಮೂಲ ಪ್ರದೇಶ, ಕುಟುಂಬದ ಇತಿಹಾಸ ಅಥವಾ ಉದ್ಯೋಗ ತಿಳಿಯಬಹುದು. ಜಪಾನಿನಲ್ಲಿ ಹೆಸರನ್ನು ಬದಲಾಯಿಸುವ ಪದ್ಧತಿಯಿದೆ. ಆದರೆ ಅದು ಅತಿವಿರಳ. ಸಾಮಾನ್ಯವಾಗಿ ವಿವಾಹವಾದ ನಂತರ ಮಹಿಳೆಯರು ತಮ್ಮ ಪತಿಯ ಕುಟುಂಬದ ಹೆಸರನ್ನು ಅಳವಡಿಸಿಕೊಳ್ಳುತ್ತಾರೆ.

ಆದರೆ ಇತ್ತೀಚಿನ ವರ್ಷಗಳಲ್ಲಿ, ಕೆಲವೊಮ್ಮೆ ಮಹಿಳೆಯರು ತಮ್ಮ ಮೂಲ ಕುಟುಂಬದ ಹೆಸರನ್ನು ಉಳಿಸಿಕೊಳ್ಳುವ ಪ್ರವೃತ್ತಿ ಹೆಚ್ಚಾಗಿದೆ. ಜಪಾನಿ ಹೆಸರಿನಲ್ಲಿ ಪುರುಷ ಮತ್ತು ಮಹಿಳಾ ಹೆಸರುಗಳು ಸ್ಪಷ್ಟವಾಗಿ ವಿಭಜನೆಯಲ್ಲದಿದ್ದರೂ, ಕೆಲವೊಂದು ಅಕ್ಷರಗಳು ಅಥವಾ ಅಂತಿಮ ಧ್ವನಿಗಳು ಲಿಂಗ ಸೂಚಿಸುತ್ತವೆ. ಪುರುಷ ಹೆಸರುಗಳು ರಿ, ಕಿ, ಟೋ, ಸಿಗೆ, ತಾಕಾ ಮುಂತಾದವು. ಉದಾಹರಣೆ, ಶಿನಜಿ, ತಾಕೇಶಿ, ಹಾರೂಕಿ. ಮಹಿಳಾ ಹೆಸರುಗಳು ಕೊ (ಅರ್ಥ ಮಗು), ಮಿ, ನಾ, ಯು, ಕಾ ಮುಂತಾದವು. ಉದಾಹರಣೆ, ಯುಮಿಕೋ, ಸಾಊಕಾ, ಹಾರುಕಾ. ಇತ್ತೀಚಿನ ವರ್ಷಗಳಲ್ಲಿ ಜಪಾನಿ ಪಾಪ್ ಸಂಸ್ಕೃತಿ, ಅನಿಮೆ, ಮತ್ತು ಸಿನಿಮಾಗಳ ಪ್ರಭಾವದಿಂದ ಜಪಾನಿ ಹೆಸರುಗಳು ಜಾಗತಿಕ ಮಟ್ಟದಲ್ಲಿ ಪ್ರಭಾವ ಬೀರುತ್ತಿವೆ. ಅನೇಕ ಅಪರಿಚಿತರು ಸಹ ನಾರುಟೋ, ಸಾಕುರಾ, ಇಚಿಗೋ, ಲೂಫಿ ಮುಂತಾದ ಹೆಸರಗಳನ್ನು ಪರಿಚಿತವಾಗಿ ಉಚ್ಚರಿಸುತ್ತಾರೆ.

**- ವಿಶ್ವೇಶ್ವರ** ಭಟ್

# ಶೃಂಗೇರಿ ಅಂಚೆ ಮತಗಳ ವರದಿ ಚುನಾವಣಾ ಆಯೋಗಕ್ಕೆ ರವಾನೆ

## ಬಿಜೆಪಿ ಅಭ್ಯರ್ಥಿ ಜೀವರಾಜ್‌ಗೆ ಮುನ್ನಡೆಯ ಮಾಹಿತಿ | ಕಾಂಗ್ರೆಸ್‌ನಿಂದ ಹೋರಾಟದ ಎಚ್ಚರಿಕೆ

• ಪ್ರಜೋದಯ ವರದಿ



**ಬೆಂಗಳೂರು:** ತೀವ್ರ ಜಟಾಪಟಿಯ ನಡುವೆ ಹೈಕೋರ್ಟ್ ಆದೇಶದಂತೆ ಶನಿವಾರ ಆರಂಭವಾದ ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ ಕಾರ್ಯ ಭಾನುವಾರ ಮುಕ್ತಾಯಗೊಂಡಿದ್ದು, ಅಧಿಕಾರಿಗಳು ಮುಚ್ಚಿದ ಲಕೋಟೆಯಲ್ಲಿ ಚುನಾವಣಾ ಆಯೋಗಕ್ಕೆ ಫಲಿತಾಂಶ ರವಾನಿಸಿದ್ದಾರೆ.

ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ಮುನ್ನಡೆ ಸಾಧಿಸಿ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಹಿನ್ನಡೆ ಅನುಭವಿಸಿದ್ದಾರೆಂದು ತಿಳಿದುಬಂದಿದೆ. 2023ರ ಚುನಾವಣೆಯ ಫಲಿತಾಂಶದ ಪ್ರಕಾರ, ಹಾಲಿ ಶಾಸಕ ಟಿ.ಡಿ.ರಾಜೇಗೌಡ 201 ಮತಗಳ ಅಂತರದಲ್ಲಿ ಗೆದ್ದಿದ್ದರು. ಅದರಲ್ಲಿ ಗೋಲ್‌ಮಾಲ್ ನಡೆದಿದೆ ಎಂದು ಬಿಜೆಪಿಯ ಜೀವರಾಜ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಮಾ.2ರಂದು ಮತ್ತೆ ಅಂಚೆ ಮತಗಳನ್ನು ಮರು ಎಣಿಕೆ ಮಾಡಬೇಕೆಂದು ಆದೇಶವಾಗಿತ್ತು.

ಈ ಬೆನ್ನಲ್ಲೇ ನಡೆಸಿದ ಮತ ಮರು ಎಣಿಕೆಯಲ್ಲಿ 2023ರ ಚುನಾವಣೆಯಲ್ಲಿ ಮಾನ್ಯವಾಗಿದ್ದ ಮತಗಳ ಪೈಕಿ ಹಾಲಿ ಶಾಸಕ ರಾಜೇಗೌಡ ಅವರ 255 ಮತಗಳು ಅಮಾನ್ಯವಾಗಿದ್ದು, ಬಿಜೆಪಿ ಅಭ್ಯರ್ಥಿಗೆ ಬಂದಿದ್ದ ಮತಗಳಲ್ಲಿ 2 ಮತಗಳು ಅಮಾನ್ಯವಾಗಿದೆ. ಈ ಮೂಲಕ ಜೀವರಾಜ್ ಅವರು ಸುಮಾರು 52 ಮತಗಳ ಅಂತರದಿಂದ ಮುನ್ನಡೆ ಸಾಧಿಸಿದ್ದಾರೆಂದು ಬಿಜೆಪಿ ಸಂಭ್ರಮಾಚರಣೆ ಮಾಡಿದೆ. ಆದರೆ ಮತಪತ್ರಗಳನ್ನು ತಿದ್ದಲಾಗಿದೆ ಎಂದು ಆರೋಪಿಸಿ ಬಿಜೆಪಿ ಅಭ್ಯರ್ಥಿ ಜೀವರಾಜ್ ಸೇರಿ ಮೂವರ ವಿರುದ್ಧ ಕಾಂಗ್ರೆಸ್ ದೂರು ದಾಖಲಿಸಿದೆ.

ಈ ಕುರಿತು ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು, ಶೃಂಗೇರಿಯಲ್ಲಿ ಕಾಂಗ್ರೆಸ್ ಅಸಿಂಧು-ಸತ್ಯಕ್ಕೆ ಜಯ. ವೋಟ್ ಚೋರ್ ಕೌನ್ ಹೈ, ರಾಹುಲ್ ಗಾಂಧಿ ಹೈ ಎಂಬ ಪೋಸ್ಟ್ ಹಂಚಿಕೊಂಡಿದ್ದಾರೆ. ಶೃಂಗೇರಿ ವಿಧಾನಸಭಾ ಕ್ಷೇತ್ರದ ಮರು ಎಣಿಕೆ ಫಲಿತಾಂಶ ಕಾಂಗ್ರೆಸ್‌ನ ಕರಾಳ ಮುಖವನ್ನು ಮತ್ತೊಮ್ಮೆ ಬಯಲು ಮಾಡಿದೆ. 2023ರಲ್ಲಿ ಶೃಂಗೇರಿಯಲ್ಲಿ ಅಕ್ರಮವಾಗಿ ತಿರಸ್ಕರಿಸಿದ್ದ ಮತಗಳನ್ನು ಪ್ರಶ್ನಿಸಿ ಕಾನೂನು ಹೋರಾಟ ಮಾಡುವ ಮೂಲಕ ಬಿಜೆಪಿ ಅಭ್ಯರ್ಥಿ ಜೀವರಾಜ್ ನ್ಯಾಯ ಪಡೆದಿದ್ದಾರೆ. ಇದು ಪ್ರಜಾಪ್ರಭುತ್ವದ ಗೆಲುವು. ಶೃಂಗೇರಿಯ ಮತದಾರರ ಮತದ ಮೌಲ್ಯಕ್ಕೆ ಸಂದ ಜಯವಾಗಿದೆ ಎಂದು ಬರೆದುಕೊಂಡಿದ್ದಾರೆ.

### ಮತ ಎಣಿಕೆ ದೊಡ್ಡ ಪಿತೂರಿ

ಶೃಂಗೇರಿ ಕ್ಷೇತ್ರದ ಮರು ಮತ ಎಣಿಕೆ ದೊಡ್ಡ ಪಿತೂರಿ, ಇಡೀ ದೇಶಕ್ಕೆ ಇಂತಹ ಕ್ರಿಮಿನಲ್ ಚಟುವಟಿಕೆ ಮಾಡುತ್ತಾರೆಂದು ಊಹಿಸಲೂ ಸಾಧ್ಯವಿಲ್ಲ. ಮಾಜಿ ಶಾಸಕ ಡಿ.ಎನ್.ಜೀವರಾಜ್ ಅವರು ಯಾವ ರೀತಿ ಅಧಿಕಾರಿಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆಂಬುದಕ್ಕೆ ಅಂಚೆ ಮತ ಎಣಿಕೆಯೇ ಸಾಕ್ಷಿ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಿಡಿಕಾರಿದ್ದಾರೆ.

ಬ್ಯಾಲೆಟ್ ಬಾಕ್ಸ್ ಅನ್ನು ತೆರೆಸಿ ಏನೆಲ್ಲಾ ಅಕ್ರಮ ಮಾಡಬಹುದು, ಕೋರ್ಟ್‌ಗೆ ಹೋಗಿ ಕೇವಲ ಅಂಚೆ ಮತ ಎಣಿಕೆಯನ್ನು ಮಾತ್ರ ಮತ್ತೆ ಎಣಿಕೆ ಮಾಡಿಸಿರುವುದು, ಅವರ ಏಜೆಂಟ್ ಸಹಿ ಮಾಡಿದ್ದನ್ನು ತಿರುಚಿದ್ದು ಇಡೀ ದೇಶಕ್ಕೆ ವ್ಯವಸ್ಥಿತ ಅಪರಾಧವಿದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ನನಗೆ ಬಂದಿರುವ ವರದಿ ನೋಡಿಕೊಂಡು ಕಾನೂನು ಪ್ರಕಾರ ಹೋರಾಟ ಮಾಡುತ್ತೇವೆ. ಸರ್ಕಾರದ ಮಟ್ಟದಲ್ಲಿ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡು ಮುಂದುವರಿಯುತ್ತೇವೆಂದರು.

### ಚುನಾವಣಾಧಿಕಾರಿ ಹೇಳಿದ್ದೇನು

ಮತ ಮರು ಎಣಿಕೆ ಬಳಿಕ ಸುದ್ದಿಗಾರರೊಂದಿಗೆ ಚುನಾವಣಾಧಿಕಾರಿ ಗೌರವ್ ಶೆಟ್ಟಿ ಅವರು ಮಾತನಾಡಿ, 2023ರ ಚುನಾವಣೆಯಲ್ಲಿ ಎಣಿಕೆಯಲ್ಲಿ ಚಲಾವಣೆಯಾಗಿದ್ದ 1,822 ಅಂಚೆ ಮತಗಳ ಪೈಕಿ ಬಿಜೆಪಿ ಅಭ್ಯರ್ಥಿ ಜೀವರಾಜ್‌ಗೆ 692 ಮತಗಳು ಲಭಿಸಿದರೆ, ಶಾಸಕ ಟಿ.ಡಿ. ರಾಜೇಗೌಡಗೆ 569 ಮತ ಬಿದ್ದಿತ್ತು. ಆದರೆ, ಈಗಿನ ಮತ ಮರು ಎಣಿಕೆಯಲ್ಲಿ ಜೀವ್‌ರಾಜ್‌ಗೆ 690 ಮತ ಲಭಿಸಿದೆ. ಟಿ.ಡಿ. ರಾಜೇಗೌಡ ಅವರ ಮತಗಳು 255 ಅಮಾನ್ಯವಾಗಿದ್ದು, ಈ ಮೂಲಕ 314ಕ್ಕೆ ಇಳಿಕೆಯಾಗಿದೆ ಎಂದು ತಿಳಿಸಿದ್ದಾರೆ.

ನ್ಯಾಯಾಲಯದ ಆದೇಶದಂತೆ ಮತ್ತೆ ಅಂಚೆ ಮತಗಳನ್ನು ಪರಿಶೀಲನೆ ಹಾಗೂ ಮರುಎಣಿಕೆ ನಡೆಸಲಾಗಿದೆ. ಮತಪತ್ರಗಳನ್ನು ಸ್ಟ್ರಾಂಗ್ ರೂಂನಲ್ಲಿ ಲಾಕ್ ಮಾಡಿ ಇರಿಸಲಾಗಿದೆ. ಮರು ಎಣಿಕೆಯಲ್ಲಿ ಕಂಡು ಬಂದ ವ್ಯತ್ಯಾಸವನ್ನು ಚುನಾವಣಾ ಆಯೋಗಕ್ಕೆ ರವಾನಿಸಲಾಗಿದೆ ಎಂದು ತಿಳಿಸಿದ್ದಾರೆ.

## ಮಾಡಾಳು ಗ್ರಾಮದಲ್ಲಿ ಪ್ರವಚನ ಪ್ರಾರಂಭ



• ಪ್ರಜೋದಯ ವರದಿ

**ಮಾಡಾಳು:** ಅರಸೀಕೆರೆ ತಾಲ್ಲೂಕಿನ ಮಾಡಾಳು ಗ್ರಾಮದ ಸ್ವರ್ಣ ಗೌರಿ ದೇವಾಲಯ ಆವರಣದಲ್ಲಿ ಕೋಡಿ ಮಠದ ಮಹಾತಪಸ್ವಿ ಶ್ರೀ ಶಿವಲಿಂಗಜ್ಜಯ್ಯನವರ 139ನೇ ವರ್ಷದ ಸ್ಮರಣಾರ್ಥ ಪ್ರವಚನ ಕಾರ್ಯಕ್ರಮ ಆರಂಭಿಸಲಾಗಿದೆ.

ಕೋಡಿಮಠದ ಡಾ.ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಮಾರ್ಗದರ್ಶನದಲ್ಲಿ ಮಠದ ಉತ್ತರಾಧಿಕಾರಿ ಶ್ರೀ ಚೇತನ್ ಮರಿದೇವರು ಆಶೀರ್ವಚನ ನೀಡುತ್ತಿದ್ದಾರೆ. ಜಮೀನು ಹಾಗು ಮನೆ ಕೆಲಸ ಮುಗಿಸಿ ಸಂಜೆ ವೇಳೆಗೆ ಬಿಡುವು ಮಾಡಿಕೊಳ್ಳುವ ಗ್ರಾಮಸ್ಥರು ತಂಡೋಪ ತಂಡವಾಗಿ ಆಗಮಿಸಿ ಸ್ವಾಮೀಜಿಯ ಆಶೀರ್ವಚನಕ್ಕೆ ಹಾಜರಾಗುತ್ತಿದ್ದಾರೆ.

ಶನಿವಾರ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಶ್ರೀ ಚೇತನ್ ಮರಿ ದೇವರು ಮಾತನಾಡಿ, ಸನಾತನ ಸಂಸ್ಕೃತಿಯಲ್ಲಿ ಗುರುವಿಗೆ ವಿಶಿಷ್ಟ ಸ್ಥಾನಮಾನ ನೀಡಲಾಗಿದೆ. ಅಲ್ಲದೆಗುರು-ಹಿರಿಯರನ್ನು ಗೌರವದಿಂದ ಕಾಣಲಾಗುತ್ತಿದೆ. ಮನುಷ್ಯನ ಆತ್ಮಬಲ ಬೆಳೆಯಲು ಆಧ್ಯಾತ್ಮದ ಹಸಿವು ಬೇಕು. ಆಧ್ಯಾತ್ಮಿಕತೆ ಬದುಕಿಗೆ ಆಶಾಕಿರಣ. ಆತ್ಮ ಸಂಯಮವೇ ಆಧ್ಯಾತ್ಮಿಕ ಅಡಿಪಾಯವೆಂದರು.

ಗೌರಮ್ಮ ದೇವಿ ಸೇವಾ ಸಮಿತಿ ಅಧ್ಯಕ್ಷ ಎಂ.ಎಸ್.ನಟರಾಜ್, ಗೌರವಾಧ್ಯಕ್ಷ ಎಸ್.ಮಲ್ಲಿಕಾರ್ಜುನಪ್ಪ, ಮುಖಂಡ ಎಂ.ಡಿ.ಸೋಮಶೇಖರ್, ಹೆಚ್.ಸಿ.ಮಹದೇವಪ್ಪ ಇತರರಿದ್ದರು.

# ರೋಗ ಬರುವ ಮುನ್ನವೇ ಎಚ್ಚರ ವಹಿಸಿ



• ಪ್ರಜೋದಯ ವರದಿ

**ಸಕಲೇಶಪುರ:** ರೋಗಗಳು ಬರುವ ಮುನ್ನವೇ ಎಚ್ಚರ ವಹಿಸಿದರೆ ಆಸ್ಪತ್ರೆ ಹಾಗೂ ಔಷಧಿಗಳ ಅವಲಂಬನೆ ಕಡಿಮೆ ಮಾಡಬಹುದೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ತಾಲ್ಲೂಕಿನ ಬಾಳ್ಳುಪೇಟೆಯ ಶ್ರೀ ಕೆಂಚಮ್ಮ ಮಲ್ಲೇಗೌಡ ಸಮುದಾಯ ಭವನದಲ್ಲಿ ಬಿಜೆಪಿ ಮುಖಂಡ ಜಯ ಪ್ರಕಾಶ್ ದೊಡ್ಡದಿಣ್ಣೆ ಅವರ ನೇತೃತ್ವದಲ್ಲಿ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯ ಸಂಯುಕ್ತಾಶ್ರಯದಲ್ಲಿ ಹಾಗೂ ಯುವ ವೈದ್ಯ ಡಾ|| ಲಕ್ಷ್ಮಣ್ ಗಂಗಾ ಅವರ ಮಾರ್ಗದರ್ಶನದಲ್ಲಿ ಆಯೋಜಿಸಲಾಗದ ಉಚಿತ ಆರೋಗ್ಯ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಆರೋಗ್ಯವಾಗಿದ್ದರೆ ಮಾತ್ರ ಸುಖ ಜೀವನ ನಡೆಸಲು ಸಾಧ್ಯ. ಇಲ್ಲದಿದ್ದರೆ ದುಡಿದ ಹಣವನ್ನೆಲ್ಲಾ ಆಸ್ಪತ್ರೆಗಳಿಗೆ ಖರ್ಚು ಮಾಡ ಬೇಕಾಗುತ್ತದೆ. ಆದ್ದರಿಂದ ರೋಗದ ಲಕ್ಷಣಗಳು ಕಾಣಿಸುವುದಕ್ಕೂ ಮುನ್ನವೇ ಕಾಲ ಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಂಡು ವೈದ್ಯರು ನೀಡುವ ಸಲಹೆಗಳನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕೆಂದು ಸಲಹೆ ನೀಡಿದರು.

ಆರೋಗ್ಯ ಶಿಬಿರಗಳು ಬಡವರಿಗೆ ಹೆಚ್ಚಿನ ಅನುಕೂಲ ಕಲ್ಪಿಸುತ್ತವೆ. ಇಂತಹ ಶಿಬಿರ ಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಆಯೋಜಿಸುವ ಅಗತ್ಯವಿದೆ. ಇಂದಿನ ಒತ್ತಡಪೂರ್ಣ ಜೀವನದಲ್ಲಿ ಆರೋಗ್ಯ ಕಾಪಾಡಿಕೊಳ್ಳುವುದು ಸವಾಲಾಗಿದ್ದು, ಇಂತಹ ಶಿಬಿರಗಳು ಗ್ರಾಮೀಣ ಜನತೆಗೆ ಸಹಕಾರಿಯಾಗುತ್ತವೆಂದರು.

ಶಿಬಿರದಲ್ಲಿ ವಿವಿಧ ವಿಭಾಗಗಳ ವೈದ್ಯರಿಂದ ಸುಮಾರು 500ಕ್ಕೂ ಹೆಚ್ಚು ರೋಗಿಗಳಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಲಾಯಿತು.

ಮಾಜಿ ಶಾಸಕ ಹೆಚ್.ಎಂ. ವಿಶ್ವನಾಥ್, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಚಂಚಲ ಕುಮಾರ ಸ್ವಾಮಿ, ಶಾಸಕ ಸಿಮೆಂಟ್ ಮಂಜು ಅವರ ಧರ್ಮಪತ್ನಿ ಪ್ರತಿಭಾ ಮಂಜುನಾಥ್, ಹಿಂದೂಪರ ಸಂಘಟನೆಗಳ ಮುಖಂಡ ರಘು ಸಕಲೇಶಪುರ, ಕರವೇ ಜಿಲ್ಲಾ ಕಾರ್ಯದರ್ಶಿ ರಘುಪಾಳ್ಯ, ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ನೇತ್ರಾವತಿ ಮಂಜುನಾಥ್, ಯಡೇಹಳ್ಳಿ ಮಂಜುನಾಥ್, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸದಸ್ಯರು ಭಾಗವಹಿಸಿದ್ದರು.

## ಪಿಯು ಮರುಮೌಲ್ಯಮಾಪನ: ವನ್ಯ ರಾಜ್ಯಕ್ಕೆ 3ನೇ ರ‍್ಯಾಂಕ್



• ಪ್ರಜೋದಯ ವರದಿ

**ಅರಸೀಕೆರೆ:** ಕಳೆದ ಪಿಯು ಪರೀಕ್ಷೆ ಫಲಿತಾಂಶದಲ್ಲಿ ಕಡಿಮೆ ಅಂಕ ಬಂದಿದೆ ಎಂದು ಮರು ಮೌಲ್ಯ ಮಾಪನಕ್ಕೆ ಹಾಕಿದ್ದ ಇಲ್ಲಿನ ವಾಣಿ ಜ್ಯೋದ್ಯಮಿ ಹಾಗೂ ರೋಟರಿಯನ್ ವಿಶ್ವನಾಥ್ ಅವರ ಪುತ್ರಿ ವನ್ಯ 597 ಅಂಕ ಗಳಿಸುವ ಮೂಲಕ ರಾಜ್ಯಕ್ಕೆ 3ನೇ ರಾಂಕ್‌ಗೆ ಭಾಜನರಾಗಿದ್ದಾರೆ.

ವನ್ಯ ಸಾಧನೆಗೆ ಶಾಸಕ ಕೆ.ಎಂ. ಶಿವಲಿಂಗೇಗೌಡ, ತಹಶೀಲ್ದಾರ್ ಸಂತೋಷ್ ಕುಮಾರ್, ರೋಟರಿ ಅಧ್ಯಕ್ಷ ಸುರೇಶ್, ಕೆಪಿಎಸ್ ಪಿಯು ಕಾಲೇಜ್ ಆಡಳಿತ ಮಂಡಳಿ ಅಧ್ಯಕ್ಷ ಕೆ.ಎಸ್. ವಿಶ್ವನಾಥ್ ಅಭಿನಂದಿಸಿದ್ದಾರೆ.

# ಸರ್ಕಾರಿ ಜಮೀನಿನ ಒತ್ತುವರಿ ತಡೆಗಟ್ಟಲು ಕ್ರಮ

• ಪ್ರಜೋದಯ ವರದಿ



**ಅರಕಲಗೂಡು:** ಸರ್ಕಾರಿ ಜಮೀನಿನ ಒತ್ತುವರಿ ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಕಂದಾಯ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿರುವುದಾಗಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದರು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಶನಿವಾರ ನಡೆದ ಜನಸ್ಪಂದನ ಸಭೆಯಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರಿ ಜಮೀನಲ್ಲದೆ ನಗರ ಪ್ರದೇಶಗಳಲ್ಲಿ ಉದ್ಯಾನಕ್ಕಾಗಿ ಮೀಸಲಿರಿದ ಜಾಗ, ಪಾದಾಚಾರಿ ರಸ್ತೆಯನ್ನು ವ್ಯವಸ್ಥಿತವಾಗಿ ಒತ್ತುವರಿ ಮಾಡಲಾಗುತ್ತಿದೆ. ಅದರ ಬಗ್ಗೆ ನಿರ್ಲಕ್ಷ ವಹಿಸಿ ಒತ್ತುವರಿದಾರರು ಅಲ್ಲಿ ಸ್ಥಳ ಊರಲು ಬಿಟ್ಟು ನಂತರ ಕಾನೂನು ಕ್ರಮ ಜರುಗಿಸಲು ಮುಂದಾದರೆ ವಿವಾದಕ್ಕೆ ಕಾರಣವಾಗಿ ಕಾನೂನು ಸುವ್ಯವಸ್ಥೆ ಕಾಪಾಡಲು ಸಹ ತೊಂದರೆಯಾಗುತ್ತದೆ. ಸರ್ಕಾರಿ ಜಮೀನುಗಳನ್ನು ಗುರುತಿಸಿ ಅವುಗಳನ್ನು ರಕ್ಷಣೆ ಮಾಡುವ ಜೊತೆಗೆ ಒತ್ತುವರಿಯನ್ನು ಪ್ರಾರಂಭದ ಹಂತದಲ್ಲೇ ತಡೆಗಟ್ಟುವಂತೆ ಅಧಿಕಾರಿಗಳಿಗೆ ಕಟ್ಟು ನಿಟ್ಟಿನ ಸೂಚನೆ ನೀಡಿರುವುದಾಗಿ ಹೇಳಿದರು.

ಸಾರ್ವಜನಿಕರ ಸಮಸ್ಯೆಗಳನ್ನು ಅರಿತು ಬಗೆಹರಿಸಲು ಸರ್ಕಾರದ ಸೂಚನೆಯಂತೆ ಜನಸ್ಪಂದನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ಸಭೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರೂ ಸಹ ಭಾಗವಹಿಸುತ್ತಿದ್ದಾರೆ. ಇಂದು ನಡೆದ ಸಭೆಯಲ್ಲಿ ನೂರು ಅರ್ಜಿ ಗಳು ಬಂದಿದೆ. ರಸ್ತೆ ನಿರ್ಮಾಣ, ಕೆರೆ ಒತ್ತುವರಿ ತೆರವುಗೊಳಿಸುವುದು, ಬಗರ್ ಹುಕುಂ ಸಾಗುವಳಿ ದಾರರಿಗೆ ಹಕ್ಕುಪತ್ರ ನೀಡುವುದು ಸೇರಿ ಹಲವು ಸಮಸ್ಯೆಗಳ ಕುರಿತು ಪರಿಹಾರ ಕೋರಿ ಸಾರ್ವಜನಿಕರು ಅರ್ಜಿಸಲ್ಲಿಸಿದ್ದಾರೆ. ಅರ್ಜಿಗಳನ್ನು ಪರಿಶೀಲಿಸಿ ಅಧಿಕಾರಿಗಳ ಮಟ್ಟದಲ್ಲಿ ಕ್ರಮ ಕೈಗೊಳ್ಳಬಹುದಾದಲ್ಲಿ ಕೂಡಲೇ ಪರಿಹರಿಸಲಾಗುವುದು. ಕೆಲವು ಸಮಸ್ಯೆಗಳಿಗೆ ಕಾಲಾವಕಾಶ ಅಗತ್ಯವಿದ್ದು, ನಿಗದಿತ ಸಮಯದಲ್ಲಿ ಕ್ರಮ ಜರುಗಿಸಲಾಗುವುದು. ಬಗೆಹರಿಸಲಾಗದ ಸಮಸ್ಯೆಗಳಿಗೆ ಯಾವ ಕಾರಣಕ್ಕೆ ಕ್ರಮ ಸಾಧ್ಯವಿಲ್ಲ ಎಂಬ ಅಂಶವನ್ನು ಸ್ಪಷ್ಟವಾಗಿ ಉಲ್ಲೇಖಿಸಿ ಹಿಂಬರಹ ನೀಡಲಾಗುವುದು ಎಂದರು.

ಜನಸ್ಪಂದನ ಸಭೆಯಲ್ಲಿ ಸಾರ್ವಜನಿಕರು, ಸಂಘ ಸಂಸ್ಥೆಗಳ ಮುಖಂಡರು ಸಮಸ್ಯೆಗಳ ಕುರಿತು ಮಾಹಿತಿ ನೀಡಿ ಕ್ರಮ ಕೈಗೊಳ್ಳುವಂತೆ ಅಹವಾಲು ಸಲ್ಲಿಸಿದರು. ತಹಶೀಲ್ದಾರ್ ಕೆ.ಸಿ.ಸೌಮ್ಯ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು ಹಾಗು ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

## ಐಪಿಎಲ್‌ನಲ್ಲಿ ವಿಶಿಷ್ಟ ಸಾಧನೆ ಬರೆದ ಸುನಿಲ್ ನಾರಾಯಣ್

**ಹೈದರಾಬಾದ್:** ಇಂಡಿಯನ್ ಪ್ರೀಮಿಯರ್ ಲೀಗ್ ಟಿ-20 ಕ್ರಿಕೆಟ್ ಟೂರ್ನಿಯಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ಸ್ಪಿನ್ನರ್ ಸುನಿಲ್ ನಾರಾಯಣ್ 200 ವಿಕೆಟ್‌ಗಳ ಸಾಧನೆ ಮಾಡಿದ್ದಾರೆ.

ಭಾನುವಾರ ಹೈದರಾಬಾದ್‌ನ ರಾಜೀವ್ ಗಾಂಧಿ ಮೈದಾನದಲ್ಲಿ ಸನ್ ರೈಸರ್ಸ್ ಹೈದರಾಬಾದ್ ವಿರುದ್ಧ ನಡೆದ ಪಂದ್ಯದಲ್ಲಿ ನಾರಾಯಣ್ ಈ ವಿಶಿಷ್ಟ ಸಾಧನೆ ಮಾಡಿದ್ದಾರೆ. ಅದರೊಂದಿಗೆ ಐಪಿಎಲ್‌ನಲ್ಲಿ 200 ವಿಕೆಟ್ ಗಳಿಸಿದ 3ನೇ ಬೌಲರ್ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ. 195ನೇ ಇನಿಂಗ್ಸ್‌ನಲ್ಲಿ ನಾರಾಯಣ್ ಈ ಸಾಧನೆ ಮಾಡಿದ್ದಾರೆ. ಐಪಿಎಲ್‌ನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ ಬೌಲರ್‌ಗಳ ಪಟ್ಟಿಯಲ್ಲಿ ಯಜುವೇಂದ್ರ ಚಾಹಲ್ (228) ಮುಂಚೂಣಿಯಲ್ಲಿದ್ದು, ಭುವನೇಶ್ವರ್ ಕುಮಾರ್ (215) 2ನೇ ಸ್ಥಾನದಲ್ಲಿದ್ದಾರೆ.

ಯಜುವೇಂದ್ರ ಚಾಹಲ್ 228, ಭುವನೇಶ್ವರ್ ಕುಮಾರ್ 215, ಸುನಿಲ್ ನಾರಾಯಣ್ 200, ಪಿಯೂಷ್‌ಚಾವ್ಲಾ 192, ರವಿಚಂದ್ರನ್ ಅಶ್ವಿನ್ 187, ಜಸ್‌ಪ್ರೀತ್ ಬೂಮ್ರಾ 186, ಡ್ವೇನ್ ಬ್ರಾವೊ 183, ರವೀಂದ್ರಜಡೇಜ 177, ಅಮಿತ್ ಮಿಶ್ರಾ 174, ಲಸಿತ್ ಮಾಲಿಂಗ 170.

# ಸಂಭ್ರಮದ ಕೊಪ್ಪಲು ಮಾರಮ್ಮ ಸುಗ್ಗಿ ಜಾತ್ರೆ

• ಪ್ರಜೋದಯ ವರದಿ



**ಸಕಲೇಶಪುರ:** ಪಟ್ಟಣದ ಗ್ರಾಮ ದೇವತೆ ಕೊಪ್ಪಲು ಮಾರಮ್ಮ ಅವರ ಸುಗ್ಗಿ ಜಾತ್ರೆ ಹಾಗೂ ಕೊಂಡೋತ್ಸವ ಸಡಗರದಿಂದ ಜರುಗಿತು.

ಪಟ್ಟಣದ ಮಹೇಶ್ವರಿ ನಗರದಲ್ಲಿರುವ ಗ್ರಾಮದ ಆದಿ ದೇವತೆ ಕೊಪ್ಪಲು ಮಾರಮ್ಮ ಅವರ ಸುಗ್ಗಿ ಜಾತ್ರೆ ಕಳೆದ ಆರು ದಿನಗಳಿಂದ ವಿವಿಧ ಧಾರ್ಮಿಕ ವಿಧಿವಿಧಾನಗಳೊಂದಿಗೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆ ಯಿತು. ದೇವಸ್ಥಾನ ನವೀಕರಣಗೊಂಡ ಹಿನ್ನೆಲೆ ಕಳೆದ ಸೋಮವಾರದಿಂದ ದೇವಿಗೆ ವಿಶೇಷ ವಾಸ್ತು ಹೋಮ ಸೇರಿ ವಿವಿಧ ಪೂಜೆಗಳು ನೆರವೇರಿಸಲಾಯಿತು.

ಮಂಗಳವಾರ ಅಮ್ಮನವರಿಗೆ ದುರ್ಗಾ ಹೋಮ ಹಾಗೂ ಮಾರಿಕಾಂಬ ಹೋಮ ನೆರವೇರಿಸ ಲಾಯಿತು. ಪಂಚಾಮೃತ ಅಭಿಷೇಕದೊಂದಿಗೆ ಸುಗ್ಗಿ ಜಾತ್ರೆಗೆ ಚಾಲನೆ ನೀಡಲಾಯಿತು. ಶುಕ್ರವಾರ ಅಮ್ಮನವರನ್ನು ಮಹೇಶ್ವರಿ ನಗರ, ಅಜಾದ್ ರಸ್ತೆ, ಹಳೆಸಂತೆವೇರಿ ಬಡಾವಣೆ ಸೇರಿ ವಿವಿಧ ಪ್ರದೇಶ ಗಳಲ್ಲಿ ಊರಾಡಿಸಿ ಭಕ್ತರಿಂದ ಪೂಜೆ ಸಲ್ಲಿಸಲಾಯಿತು. ರಾತ್ರಿ ವಿದ್ಯುತ್ ಅಲಂಕಾ ರದ ನಡುವೆ ಪಟ್ಟಣದ ರಾಜಬೀದಿಯಲ್ಲಿ ಬೆಳ್ಳಿ ರಥದಲ್ಲಿ ಮೆರವಣಿಗೆ ನಡೆಸಲಾಯಿತು.

ಶುಕ್ರವಾರ ರಾತ್ರಿ ಸುಗ್ಗಿ ಕುಣಿತ ನಡೆದಿದ್ದು, ಶನಿವಾರ ಬೆಳಗ್ಗಿನ ಜಾವ ಕೊಂಡೋತ್ಸವ ಜರುಗಿತು. ಈ ಸಂದರ್ಭದಲ್ಲಿ ನೂರಾರು ಭಕ್ತರು ಕೆಂಡದಲ್ಲಿ ನಡೆದು ತಮ್ಮ ಹರಕೆಗಳನ್ನು ನೆರವೇರಿಸಿದರು. ಜಾತ್ರೆಯ ಅವಧಿಯಲ್ಲೆಲ್ಲಾ ಭಕ್ತರಿಗೆ ಅನ್ನದಾನ ಪ್ರಸಾದ ವಿತರಿಸಲಾಯಿತು.

ಶನಿವಾರ ರಾತ್ರಿ ದೇವತೆಯ ಬಂಟರಾದ ಬೂತರಾಯ, ಕೆಂಚರಾಯ ಹಾಗೂ ಕರಿರಾಯರಿಗೆ ಕೋಳಿ ಮತ್ತು ಕುರಿಗಳನ್ನು ದೂಳ್‌ಮರಿ ಹರಕೆಯಾಗಿ ಅರ್ಪಿಸ ಲಾಯಿತು.

ಮಾರಮ್ಮ ದೇವಸ್ಥಾನದ ಆಡಳಿತ ಮಂಡಳಿ ವತಿಯಿಂದ ಧಾರ್ಮಿಕ ಕಾರ್ಯಕ್ರಮಗಳನ್ನು ಅಚ್ಚು ಕಟ್ಟಾಗಿ, ಶ್ರದ್ದೆ ಮತ್ತು ಭಕ್ತಿಯಿಂದ ಆಯೋಜಿಸಲಾಯಿತು.

# ಇಂದಿರಾ ಕ್ಯಾಂಟೀನ್ ಪರಿಶೀಲಿಸಿದ ಪುರಸಭೆ ಅಧ್ಯಕ್ಷೆ

• ಪ್ರಜೋದಯ ವರದಿ



**ಬೇಲೂರು:** ಪಟ್ಟಣದ ಇಂದಿರಾ ಕ್ಯಾಂಟೀನ್‌ಗೆ ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಅವರು ಭೇಟಿ ನೀಡಿ ಸ್ವಚ್ಛತೆ, ಆಹಾರದ ಗುಣಮಟ್ಟ, ಮೂಲಭೂತ ಸೌಲಭ್ಯಗಳ ಬಗ್ಗೆ ಪರಿಶೀಲನೆ ನಡೆಸಿದರು.

ಕ್ಯಾಂಟೀನ್‌ನಲ್ಲಿನ ಸೇವೆಗಳ ಬಗ್ಗೆ ಮಾಹಿತಿ ಪಡೆದ ಅವರು, ಕಡಿಮೆ ದರದಲ್ಲಿ ಬೆಳಗಿನ ತಿಂಡಿ ಹಾಗು ಊಟ ಒದಗಿಸುವ ಯೋಜನೆ ಬಡವರು ಮತ್ತು ವೃದ್ಧರಿಗೆ ಅತ್ಯಂತ ಉಪ ಯುಕ್ತವಾಗಿದೆ. ವಯಸ್ಸಾದವರು ಹಾಗು ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಆಹಾರ ದೊರಕುತ್ತಿರುವುದು ಮಹತ್ವದ ವಿಷಯವಾಗಿದೆ ಎಂದು ಹೇಳಿದರು.

ಕ್ಯಾಂಟೀನ್‌ನಲ್ಲಿ ಉತ್ತಮ ಸ್ವಚ್ಛತೆ ಕಾಪಾಡಿಕೊಂಡಿರುವುದನ್ನು ಶ್ಲಾಘಿಸಿದ ಅವರು, ಗ್ಯಾಸ್ ಕೊರತೆಯಿದ್ದರೂ ಸಿಬ್ಬಂದಿ ಸೌದೆ ಒಲೆಯಲ್ಲಿ ಅಡುಗೆ ಮಾಡಿ ಯಾವುದೇ ವ್ಯತ್ಯ ಯವಿಲ್ಲದೆ ಊಟ ಬಡಿಸುತ್ತಿರುವುದು ಅವರ ಬದ್ಧತೆಯನ್ನು ತೋರಿಸುತ್ತದೆಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕುಡಿಯುವ ನೀರಿನ ದುರ್ಬಳಕೆ ತಪ್ಪಿಸಲು ಫಿಲ್ಟರ್ ಅನ್ನು ಕ್ಯಾಂಟೀನ್ ಒಳಗೆ ಅಳವಡಿಸಿರುವ ಕ್ರಮವನ್ನು ಸಹ ಅವರು ಪ್ರಶಂಸಿದರು.

ಈ ವೇಳೆ ಮಾತನಾಡಿದ ಪುರಸಭೆ ಮಾಜಿ ಅಧ್ಯಕ್ಷ ವೆಂಕಟೇಶ್ ಅವರು, ಸಿದ್ದರಾಮಯ್ಯ ಸರ್ಕಾರದಲ್ಲಿ ಬಸವಣ್ಣನವರ ಆಶಯದಂತೆ ಆರಂಭವಾದ ಇಂದಿರಾ ಕ್ಯಾಂಟೀನ್ ಯೋಜನೆ ಬಡವರು, ಕೂಲಿ ಕಾರ್ಮಿಕರು, ವೃದ್ಧರು ಹಾಗೂ ವಿದ್ಯಾರ್ಥಿ ಗಳಿಗೆ ಅತ್ಯಂತ ಸಹಾಯಕವಾಗಿದ್ದು, ಜನಪ್ರಿಯತೆಯನ್ನು ಗಳಿಸಿದೆ ಎಂದು ಹೇಳಿದರು.

ಶಕ್ತಿ ಯೋಜನೆಯಿಂದ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ದೊರಕುತ್ತಿರುವುದರಿಂದ ದೇವಸ್ಥಾನಗಳಿಗೆ ಭೇಟಿ ನೀಡುವ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ. ಅವರಿಗೆ ಸಹ ಕಡಿಮೆ ದರದಲ್ಲಿ ಊಟದ ವ್ಯವಸ್ಥೆ ಲಭ್ಯವಾಗುತ್ತಿರುವುದು ಮತ್ತೊಂದು ಸಕಾರಾತ್ಮಕ ಬೆಳವಣಿಗೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ಬಸವರಾಜು ಶಿಗ್ಗಾವಿ, ಆರೋಗ್ಯಾಧಿಕಾರಿ ಲೋಹಿತ್, ಪುರಸಭೆ ಸದಸ್ಯರು ಉಪಸ್ಥಿತರಿದ್ದರು.

## ಸಿಲಿಂಡರ್ ಬೆಲೆ ಏರಿಕೆ ಹಿಂಪಡೆಯಲು ಆಗ್ರಹ

• ಪ್ರಜೋದಯ ವರದಿ

**ಹಾಸನ:** ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ತೀವ್ರ ಏರಿಕೆ ಗ್ರಾಹಕರ ಮೇಲೆ ಹೊರೆಯಾಗಿದೆ. ಈ ಬೆಲೆ ಏರಿಕೆಯನ್ನು ತಕ್ಷಣವೇ ಹಿಂಪಡೆಯಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಎಂ) ಜಿಲ್ಲಾ ಕಾರ್ಯ ದರ್ಶಿ ಹೆಚ್.ಆರ್.ನವೀನ್‌ಕುಮಾರ್ ಅವರು ಒತ್ತಾಯಿಸಿದ್ದಾರೆ.

ವಾಣಿಜ್ಯ ಸಿಲಿಂಡರ್ ದರಗಳಲ್ಲಿ ಒಂದು ಸಾವಿರ ರೂ.ಗಳಷ್ಟು ಏರಿಕೆಯ ಪರಿಣಾಮ ಬೇರೆಲ್ಲ ಬೆಲೆಗಳು ಏರಿಕೆಗೆ ಕಾರಣವಾಗಲಿದೆ. ವಾಣಿಜ್ಯ ಸಂಸ್ಥೆಗಳು ಹೊರೆಗಳನ್ನು ಗ್ರಾಹಕರ ಮೇಲೆ ಹಾಕಲಾಗುತ್ತದೆ. ಇದು ಹಣದುಬ್ಬರವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಅನೇಕ ಸಣ್ಣ ಸಂಸ್ಥೆಗಳು ಮುಚ್ಚುವಂತಾಗುತ್ತವೆ, ಇದು ಈಗಾಗಲೇ ನಡೆಯುತ್ತಿರುವ ಲೇ -ಆಫ್‌ಗಳು ಮತ್ತು ಉದ್ಯೋಗ ನಷ್ಟಗಳಿಗೆ ಕಾರಣವಾಗುತ್ತದೆಂದು ಆರೋಪಿಸಿದರು.

14 ಕೆಜಿ ಗೃಹ ಬಳಕೆಯ ಸಿಲಿಂಡರ್‌ಗಳನ್ನು ಸದ್ಯಕ್ಕೆ ಬಿಡಲಾಗಿದ್ದರೂ, 5 ಕೆಜಿ ಸಬ್ಸಿಡಿ ರಹಿತ ಸಿಲಿಂಡರ್‌ಗಳ ಬೆಲೆಯನ್ನು 261 ರೂ. ಗಳಷ್ಟು ತೀವ್ರವಾಗಿ ಹೆಚ್ಚಿಸಲಾಗಿದೆ. 5 ಕೆಜಿ ಸಿಲಿಂಡರ್‌ಗಳ ಬೆಲೆ ಏರಿಕೆಯು 14 ಕೆಜಿ ಸಿಲಿಂಡರ್‌ಗಳನ್ನು ಪಡೆಯುವ ಅಸಮರ್ಥತೆ ಯಿಂದಾಗಿ ಅವುಗಳನ್ನು ಬಳಸುವ ಸಣ್ಣ ಮನೆಗಳು ಮತ್ತು ವಲಸೆ ಕಾರ್ಮಿಕರ ಮೇಲೆ ಅತ್ಯಂತ ಪ್ರತಿಕೂಲ ಪರಿಣಾಮ ಬೀರುತ್ತದೆಂದು ತಿಳಿಸಿದ್ದಾರೆ.

ಕಳೆದ ಎರಡು ತಿಂಗಳಲ್ಲಿ ಕೇಂದ್ರ ಸರ್ಕಾರವು ವಾಣಿಜ್ಯ ಸಿಲಿಂಡರ್‌ಗಳ ಬೆಲೆಯಲ್ಲಿ 2ನೇ ಬಾರಿ ಏರಿಕೆ ಮಾಡಿದೆ. ಸರ್ಕಾರವು ಸಿಲಿಂಡರ್ ತೆರಿಗೆಗಳಿಂದ ಬರುವ ಆದಾಯವನ್ನು ಬಿಟ್ಟು ಕೊಡಲು ಸಿದ್ಧವಾಗಿಲ್ಲ. ಇದು ಬಡವರ ವಿರೋಧಿಯಾಗಿದೆ ಎಂದು ಆರೋಪಿಸಿದರು.

# ಗ್ರಾಮೀಣ ಭಾಗಕ್ಕೆ ಮೂಲಸೌಕರ್ಯ: ಜನಪ್ರತಿನಿಧಿಗಳ ಕರ್ತವ್ಯ



• ಪ್ರಜೋದಯ ವರದಿ

**ಆಲೂರು:** ಜನಸಾಮಾನ್ಯರಿಗೆ ಮೂಲ ಸೌಕರ್ಯ ಒದಗಿಸುವುದು ಜನಪ್ರತಿನಿಧಿಗಳ ಪ್ರಮುಖ ಕರ್ತವ್ಯ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ತಾಲ್ಲೂಕಿನ ಪಾಳ್ಯ ಹೋಬಳಿ ಅಬ್ಬನ ಗ್ರಾಮದಿಂದ ಸಿಂಗೋಡನಹಳ್ಳಿ ಗ್ರಾಮಕ್ಕೆ ಸಂಪರ್ಕಿ ಸುವ 50 ಲಕ್ಷ ರೂ. ವೆಚ್ಚದ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ದೇಶ ಸ್ವಾತಂತ್ರ್ಯ ಪಡೆದು 80 ವರ್ಷಗಳಾದರೂ ಗ್ರಾಮೀಣ ಪ್ರದೇಶ ಗಳಲ್ಲಿ ಇನ್ನೂ ಮೂಲ ಸೌಲಭ್ಯಗಳ ಕೊರತೆ ಇದೆ. ಅನೇಕ ಕುಗ್ರಾಮಗಳಲ್ಲಿ ಇನ್ನೂ ಕಾಲು ದಾರಿಯಲ್ಲೇ ಸಂಚಾರ ನಡೆಯುತ್ತಿದೆ. ಅಂತಹ ಪ್ರದೇಶಗಳನ್ನು ಗುರುತಿಸಿ ರಸ್ತೆ ನಿರ್ಮಾಣಕ್ಕೆ ಮುಂದಾಗಿರುವುದಾಗಿ ಹೇಳಿದರು.

ಪ್ರಸ್ತುತ ಬಿಸಿಲಿನ ತೀವ್ರತೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಬೆಳಿಗ್ಗೆ 10ರಿಂದ ಸಂಜೆ 4ರ ವರೆಗೆ ನೆರಳಿನಲ್ಲಿ ಉಳಿದು ಕೆಲಸ ನಿರ್ವಹಿಸುವಂತೆ ಸಲಹೆ ನೀಡಿದರು. ಆಶಾ ಕಾರ್ಯಕರ್ತೆಯರು ಮನೆ ಮನೆಗೆ ಭೇಟಿ ನೀಡುತ್ತಿರುವ ಹಿನ್ನಲೆ ಯಲ್ಲಿ ಆರೋಗ್ಯದಲ್ಲಿ ಏನಾದರೂ ವ್ಯತ್ಯಾಸ ಕಂಡುಬಂದರೆ ತಕ್ಷಣ ತಿಳಿಸಿ ವೈದ್ಯಕೀಯ ಸಲಹೆ ಪಡೆಯಬೇಕೆಂದರು.

ಇದೇ ಸಂದರ್ಭದಲ್ಲಿ ಚಿನ್ನಳ್ಳಿ ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಹಾಗು 1.10 ಕೋಟಿ ರೂ. ವೆಚ್ಚದಲ್ಲಿ ಚಿನ್ನಹಳ್ಳಿ-ಮಗ್ಗೆ ಸಂಪರ್ಕ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಧನಂಜಯ್, ಆಲೂರು-ಕಟ್ಟಾಯ ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಬ್ಬನ ಕೃಷ್ಣಮೂರ್ತಿ, ಅಬ್ಬನ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಚಂದ್ರಶೆಟ್ಟಿ, ನಿರ್ದೇಶಕ ಸಂಪತ್, ಬಿಜೆಪಿ ಮುಖಂಡರಾದ ವಿರೂಪಾಕ್ಷ, ಯುವ ಮೋರ್ಚಾ ಅಧ್ಯಕ್ಷ ಗಣೇಶ್ ಸ್ನೇಹಜೀವಿ, ರವೀಂದ್ರ, ಚೇತನ್ ಹಾಗು ಇದ್ದರು.

## ಮಹನೀಯರ ಆದರ್ಶ ಮೈಗೂಡಿಸಿಕೊಳ್ಳಲು ಸಲಹೆ

• ಪ್ರಜೋದಯ ವರದಿ


**ಅರಸೀಕೆರೆ:** ನಗರದಲ್ಲಿ ನೂತನವಾಗಿ ಪ್ರತಿಷ್ಠಾಪಿಸಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಪ್ರತಿಮೆಗೆ ಮಾಲಾರ್ಪಣೆ ಮಾಡುವುದರೊಂದಿಗೆ ಬಿಜೆಪಿ ಮುಖಂಡರು ಹಾಗೂ ಕಾರ್ಯ ಕರ್ತರು ಗೌರವ ಸಮರ್ಪಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿದ್ದೇಶ್ ನಾಗೇಂದ್ರ, ಅವರ ನೇತೃತ್ವದಲ್ಲಿ ಆಗಮಿಸಿದ ತಾಲ್ಲೂಕು ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಕ್ರಾಂತಿವೀರ ರಾಯಣ್ಣನ ಪ್ರತಿಮೆಗೆ ಮಾಲಾರ್ಪಣೆ ಜೊತೆಗೆ ಪುಷ್ಪಾರ್ಚನೆ ಮಾಡುವ ಮೂಲಕ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಅವರು ಮಾತನಾಡಿ, ವಿಶ್ವಗುರು ಬಸವಣ್ಣ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಸಂವಿಧಾನ ಶಿಲ್ಪಿ ಡಾ. ಬಿ. ಆರ್.ಅಂಬೇಡ್ಕರ್ ಅವರ ಪ್ರತಿಮೆಗಳನ್ನು ಸ್ಥಾಪಿಸಿದರೆ ಸಾಲದು ನಾವು ಅವರ ನಡೆ ನುಡಿ ಅರಿತು ಅವರು ತೋರಿದ ದಾರಿಯಲ್ಲಿ ನಾವೆಲ್ಲ ಸಾಗಿದ್ದೆ ಆದರೆ ಅದೇ ನಿಜವಾಗಿಯೂ ನಾವು ಅವರಿಗೆ ಸಲ್ಲಿಸುವ ಗೌರವ ಎಂದು ಹೇಳಿದರು.

ಜಿಲ್ಲಾ ಕಾರ್ಯದರ್ಶಿ ಪುರುಷೋತ್ತಮ್ ಅವರು ಮಾತನಾಡಿ, ಕಲ್ಪತರು ನಾಡು, ಸಿದ್ದರ ಬೀಡು, ಅರಸೀ ಕಟ್ಟಿದ ನಗರದ ಆಯ್ದ ಭಾಗಗಳಲ್ಲಿ ತಲೆ ಎತ್ತಿ ನಿಂತಿರುವ ಬಸವಣ್ಣ, ರಾಯಣ್ಣ ಹಾಗೂ ಅಂಬೇಡ್ಕರ್ ಅವರ ಪ್ರತಿಮೆಗಳು ನಗರದ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸಿದೆ. ಈ ಮಹನೀಯರ ನಿತ್ಯದರ್ಶನದಿಂದ ಪ್ರತಿಯೊಬ್ಬರಲ್ಲೂ ದೇಶಾಭಿಮಾನ ಬೆಳೆದು ಸಾಮರ್ಥ್ಯದ ಜೀವನ ನಡೆಸುವಂತಹ ಮನಸ್ಥಿತಿ ಪ್ರತಿಯೊಬ್ಬರಲ್ಲೂ ಬೆಳೆಯಲಿ ಎಂದು ಆಶಯ ವ್ಯಕ್ತಪಡಿಸಿದರು.

ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗಿರೀಶ್, ಉಪಾಧ್ಯಕ್ಷ ಗಂಗಾಧರ್, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷರಾದ ಅಮಿತ್, ಗ್ರಾಮಾಂತರ ಅಧ್ಯಕ್ಷರಾದ ಯತೀಶ್, ನಗರ ಮಂಡಲ ಅಧ್ಯಕ್ಷ ಅವಿನಾಶ್ ನಾಯ್ಡು, ಪ್ರಧಾನ ಕಾರ್ಯದರ್ಶಿಗಳಾದ ಕಿರಣ್, ಮಂಜು, ಸಿಂಧು ಶಿವರಾಜ್ ಸೇರಿ ಸ್ಥಳೀಯ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.



## ಅನುಚಿತವಾಗಿ ವರ್ತಿಸಿದರೆ ಮತ್ತೆ ದಾಳಿ: ಇರಾನ್‌ಗೆ ಟ್ರಂಪ್ ಎಚ್ಚರಿಕೆ



**ವಾಷಿಂಗ್ಟನ್:** ಇರಾನ್ ಹೊಸದಾಗಿ ನೀಡಿರುವ ಪ್ರಸ್ತಾವನೆ ಗಳನ್ನು ಪರಾಮರ್ಶೆ ಮಾಡುತ್ತಿ ದ್ದೇವೆ. ಆದರೆ ಇರಾನ್ ಅನುಚಿತವಾಗಿ ವರ್ತಿಸಿದರೆ ಮತ್ತೆ ದಾಳಿ ನಡೆಸುತ್ತೇವೆಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಕಳೆದ 47 ವರ್ಷಗಳಲ್ಲಿ ಮಾನವೀಯತೆ ಹಾಗೂ ಜಗತ್ತಿಗೆ ಮಾಡಿದ ತೊಂದರೆಗೆ ಇರಾನ್ ಇನ್ನೂ ದೊಡ್ಡ ಬೆಲೆಯನ್ನು ತೆತ್ತಿಲ್ಲ ಎಂದು ಹೇಳಿದ್ದಾರೆ.

ಹಾಗೊಂದು ವೇಳೆ ಇರಾನ್ ಅನುಚಿತವಾಗಿ, ಏನಾದರೂ ಕೆಟ್ಟದ್ದನ್ನು ಮಾಡಿದರೆ ಅದು ಸಂಭವಿಸುವ ಸಾಧ್ಯತೆಯಿದೆ ಎಂದು ಟ್ರಂಪ್ ಮುನ್ನೆಚ್ಚರಿಕೆ ನೀಡಿದ್ದಾರೆ.

ಇರಾನ್‌ನ ಹೊಸ ಪ್ರಸ್ತಾವನೆ ಕುರಿತು ಪ್ರತಿಕ್ರಿಯಿಸಿದ ಅವರು, ನಾನು ಅದನ್ನು ಪರಾಮರ್ಶೆ ನಡೆಸಲಿದ್ದೇನೆ ಎಂದಷ್ಟೇ ಹೇಳಿದ್ದಾರೆ.

ಇರಾನ್ ಬಹುಹಂತದ ಪ್ರಸ್ತಾವವನ್ನು ಅಮೇರಿಕಾಕ್ಕೆ ರವಾನಿಸಿದೆ. ಅದರಲ್ಲಿ ಹೊರ್ಮುಜ್ ಜಲಸಂಧಿ ಮುಕ್ತ ಗೊಳಿಸುವುದು. ಇರಾನ್ ಮೇಲೆ ಅಮೇರಿಕಾ ವಿಧಿಸಿರುವ ದಿಗ್ಬಂಧನ ತೆರವು ಗೊಳಿಸುವುದು ಮತ್ತು ಲೆಬನಾನ್‌ನಲ್ಲಿ ಯುದ್ಧವನ್ನು ಶಾಶ್ವತವಾಗಿ ಕೊನೆಗೊಳಿಸುವುದು ಸೇರಿದೆ.

ಇರಾನ್ ಪ್ರಸ್ತಾವನೆಯ ಪ್ರಕಾರ, ಅಂತಹ ಒಪ್ಪಂದದ ಬಳಿಕವಷ್ಟೇ ಅಣ್ವಸ್ತ್ರ ಕಾರ್ಯಕ್ರಮದ ಕುರಿತು ಒಪ್ಪಂದಕ್ಕೆ ಬರಲು ಮತ್ತೊಂದು ತಿಂಗಳ ಮಾತುಕತೆಯನ್ನು ಪ್ರಾರಂಭಿಸಲಾಗುವುದೆಂದು ಮೂಲಗಳನ್ನು ಉಲ್ಲೇಖಿಸಿ ಆಕ್ಸಿಯೋಸ್ ವರದಿ ಮಾಡಿದೆ.

## ಐಸಿಎಸ್‌ಇ: ಎಸ್‌ಆರ್‌ಎಸ್ ಪ್ರಜ್ಞಾ ಶಾಲೆಗೆ ಶೇ.100 ಫಲಿತಾಂಶ



• ಪ್ರಜೋದಯ ವರದಿ

**ಹಾಸನ:** ಪ್ರಸಕ್ತ ಸಾಲಿನ ಭಾರತೀಯ ಪ್ರೌಢ ಶಿಕ್ಷಣದ ಪ್ರಮಾಣ ಪತ್ರ (ಐಸಿಎಸ್‌ಇ) ವಾರ್ಷಿಕ ಪರೀಕ್ಷೆಯಲ್ಲಿ ನಗರದ ಎಸ್‌ಆರ್‌ಎಸ್ ಪ್ರಜ್ಞಾ ವಿದ್ಯಾ ಶಾಲೆ ಶೇ.100 ರಷ್ಟು ಫಲಿತಾಂಶ ಗಳಿಸಿದೆ.

ವಿದ್ಯಾರ್ಥಿನಿ ತನ್ವಿಕಾ ಶೇ.98 ಫಲಿತಾಂಶದೊಂದಿಗೆ ಶಾಲೆಗೆ ಪ್ರಥಮ ಸ್ಥಾನ ಪಡೆದರೆ ಅಕ್ಷಯ್ ಎಸ್.ಗೌಡ ಶೇ.97.6 ಹಾಗು ಎಂ.ಶಿಂಸನ ಶೇ.97 ಫಲಿತಾಂಶದೊಂದಿಗೆ ದ್ವಿತೀಯ ಮತ್ತು ತೃತೀಯ ಸ್ಥಾನ ತಮ್ಮದಾಗಿ ಸಿಕೊಂಡಿದ್ದಾರೆ. ಪರೀಕ್ಷೆಗೆ ಹಾಜರಾಗಿದ್ದ 96 ವಿದ್ಯಾರ್ಥಿಗಳಲ್ಲಿ 78 ಮಕ್ಕಳು ಅತ್ಯುತ್ತಮ ಶ್ರೇಣಿ, 18 ಮಕ್ಕಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಶಾಲಾ ಆಡಳಿತ ಮಂಡಳಿ ಹಾಗು ಬೋಧಕ, ಬೋಧಕೇತರ ಸಿಬ್ಬಂದಿ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

CMYK CMYK CMYK CMYK

# ಅವಧಿಗೂ ಮೊದಲೇ ಮುಂಗಾರು ಆಗಮನ

## ಹವಾಮಾನ ಇಲಾಖೆ ಮುನ್ಸೂಚನೆ | ಮಾಸಾಂತ್ಯದಲ್ಲಿ ಎಲ್ ನಿನೊ ಪ್ರಭಾವ ಸಾಧ್ಯತೆ

• ಪ್ರಜೋದಯ ವರದಿ

**ಬೆಂಗಳೂರು:** ಈ ಬಾರಿ ಅವಧಿಗೂ ಮೊದಲೇ ಮುಂಗಾರು ಮಳೆ ಶುರುವಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದ್ದು, ಅಂಡಮಾನ್ ಮತ್ತು ಕೇರಳಕ್ಕೆ ಚಂಡ ಮಾರುತಗಳು ಸಾಮಾನ್ಯಕ್ಕಿಂತ ಬೇಗ ಆಗಮಿಸಲಿವೆ ಎನ್ನಲಾಗಿದೆ.

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ, ನೈಋತ್ಯ ಮುಂಗಾರು ಮಳೆಯು ಮೇ 14 ಮತ್ತು 16ರ ನಡುವೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಗೆ ಮುಂಚಿತವಾಗಿ ಪ್ರವೇಶಿಸಲಿದೆ. ಅಂತಾರಾಷ್ಟ್ರೀಯ ಮಾದರಿಗಳು ಕೇರಳಕ್ಕೆ ಮುಂಗಾರು ಮೇ 25ರ ಸುಮಾರಿಗೆ ಬರಬಹುದು ಎಂದು ಅಂದಾಜಿಸಿವೆ.

ಆದರೆ ಐಎಂಡಿಯ ಅಧಿಕೃತ ಅಂದಾಜಿನ ಪ್ರಕಾರ ಕೇರಳಕ್ಕೆ ಸಾಮಾನ್ಯ ದಿನಾಂಕವಾದ ಜೂ. 1ರ ಹತ್ತಿರದಲ್ಲಿ ಅಥವಾ ಅದಕ್ಕಿಂತಲೂ ಮೊದಲೇ ಮಳೆ ಆರಂಭವಾಗುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

ಈ ಬಾರಿ ನೈಋತ್ಯ ಮುಂಗಾರು ಅವಧಿಗಿಂತ ಮುಂಚಿತವಾಗಿ ಅಂಡಮಾನ್ ಪ್ರವೇಶಿ ಸಲಿದ್ದು, ಮೇ ಕೊನೆಯ ವಾರದಲ್ಲೇ ಕೇರಳಕ್ಕೆ ಅಪ್ಪಳಿಸುವ ಸಾಧ್ಯತೆಯಿದೆ. ಈ ಬಾರಿಯ ಮಳೆಯ ಮೇಲೆ ಎಲ್ ನಿನೊ ಪ್ರಭಾವ ಬೀರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮುಂಗಾರು ಮಾರುತವು ಅವಧಿಗಿಂತ ಮೊದಲೇ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಗೆ ಪ್ರವೇಶಿಸುವ ಸಾಧ್ಯತೆ ಇದೆ. ಜೂನ್ 1ರ ಬದಲು ಮೇ ಕೊನೆಯ ವಾರದಲ್ಲೇ ಕೇರಳ ಕರಾವಳಿಗೆ ಅಪ್ಪಳಿಸಬಹುದೆಂದು ಇಲಾಖೆ ತಿಳಿಸಿದೆ.



**ವಾಡಿಕೆಗಿಂತ ಹೆಚ್ಚು ಮಳೆ**

ಮೇ ತಿಂಗಳಲ್ಲಿ ದೇಶದ ಹಲವು ಭಾಗಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಇದು ಕೃಷಿ ಚಟುವಟಿಕೆಗಳಿಗೆ ಕೆಲ ಮಟ್ಟಿಗೆ ಸಹಕಾರಿ ಆಗಬಹುದು. ಆದರೆ, ಈಶಾನ್ಯ, ಪೂರ್ವ ಹಾಗು ಕೇಂದ್ರ ಭಾರತದ ಕೆಲವು ಪ್ರದೇಶಗಳಲ್ಲಿ ಮಳೆಯ ಪ್ರಮಾಣ ವಾಡಿಕೆಯಷ್ಟೇ ಅಥವಾ ಅದಕ್ಕಿಂತ ಕಡಿಮೆ ಇರುವ ಸಾಧ್ಯತೆಯಿದೆ ಎಂದು ಎಚ್ಚರಿಕೆ ನೀಡಲಾಗಿದೆ.

ಈ ನಡುವೆ ನಡುವೆ ದೇಶದ ಬಹುತೇಕ ಭಾಗಗಳಲ್ಲಿ ಉಷ್ಣಾಂಶ ಹೆಚ್ಚಾಗುವ ಸಾಧ್ಯತೆ ಇದೆ. ವಿಶೇಷವಾಗಿ ಉತ್ತರ ಭಾರತ ಹಾಗು ಹಿಮಾಲಯದ ತಪ್ಪಲಿನ ಪ್ರದೇಶಗಳಲ್ಲಿ ಹೀಟ್ ವೇವ್ ಪರಿಣಾಮ ಹೆಚ್ಚು ಕಾಣಿಸಿಕೊಳ್ಳಬಹುದು. ಏಪ್ರಿಲ್ ತಿಂಗಳಲ್ಲಿ ದಕ್ಷಿಣ ಭಾರತದಲ್ಲಿ ಸಾಮಾನ್ಯ ಕ್ಕಿಂತ ಹೆಚ್ಚಿನ ತಾಪಮಾನ ದಾಖಲಾಗಿದ್ದರೆ ಇತರ ಭಾಗಗಳಲ್ಲಿ ಕನಿಷ್ಟ ತಾಪಮಾನ ಸಾಮಾನ್ಯ ಮಟ್ಟದಲ್ಲೇ ಇತ್ತು.

**ಎಲ್ ನಿನೊ ಪರಿಣಾಮ**

ಪೆಸಿಫಿಕ್ ಮಹಾಸಾಗರದಲ್ಲಿ ನೀರಿನ ತಾಪಮಾನ ಹೆಚ್ಚಾಗುತ್ತಿರುವ ಹಿನ್ನಲೆ ಎಲ್ ನಿನೊ ಪರಿಸ್ಥಿತಿ ನಿರ್ಮಾಣವಾಗಿದ್ದು, ಇದು ಈ ವರ್ಷದ ಮುಂಗಾರು ಮಳೆಯ ಪ್ರಮಾಣದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಒಟ್ಟಾರೆ ಮಳೆಯ ಪ್ರಮಾಣ ವಾಡಿಕೆಗಿಂತ ಕಡಿಮೆಯಾಗುವ ಸಾಧ್ಯತೆ ಇದೆ ಎಂಬ ಅಂದಾಜು ವ್ಯಕ್ತವಾಗಿದೆ. ಹವಾಮಾನ ಇಲಾಖೆ ನೀಡಿರುವ ಈ ಮುನ್ಸೂಚನೆ ಹಿನ್ನಲೆಯಲ್ಲಿ ರೈತರು ಹಾಗು ಸಾರ್ವಜನಿಕರು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಆದಾಗ್ಯೂ ಪ್ರಸ್ತುತ ತಟಸ್ಥವಾಗಿದ್ದರೂ, ಮುಂದಿನ ದಿನಗಳಲ್ಲಿ ಪಾಸಿಟಿವ್ ಉಂಟಾಗುವ ಸಾಧ್ಯತೆಯಿದೆ. ಇದು ಉತ್ತಮ ಮಳೆಗೆ ಪೂರಕವಾಗಿದೆ. ಒಳನಾಡಿನ ವಿಪರೀತ ಶಾಖವು ಕಡಿಮೆ ಒತ್ತಡದ ಪ್ರದೇಶವನ್ನು ನಿರ್ಮಿಸಿದ್ದು, ಇದು ತೇವಾಂಶಭರಿತ ಮಾರುತಗಳನ್ನು ನಿಗದಿತ ಸಮಯಕ್ಕಿಂತ ಮೊದಲೇ ಭೂಮಿಯತ್ತ ಸೆಳೆಯುವ ಸಾಧ್ಯತೆಯಿದೆ.

**ಕರ್ನಾಟಕದ ಮೇಲೂ ಪರಿಣಾಮ**

2026ರ ಮುಂಗಾರು ಮತ್ತು ಪ್ರಸ್ತುತ ಹವಾಮಾನ ಬದಲಾವಣೆಗಳು ಕರ್ನಾಟಕದ ಮೇಲೂ ಪರಿಣಾಮ ಬೀರಲಿವೆ. ಏಪ್ರಿಲ್ ಅಂತ್ಯ ಮತ್ತು ಮೇ ಆರಂಭದಲ್ಲಿ ರಾಜ್ಯಾದ್ಯಂತ ಬೀಳುತ್ತಿರುವ ಮುಂಗಾರು ಪೂರ್ವ ಮಳೆಯಿಂದಾಗಿ ಬೆಂಗಳೂರು ಸೇರಿ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ತಾಪಮಾನವು 1-2 ಡಿಗ್ರಿಯಷ್ಟು ಇಳಿಕೆಯಾಗಿದೆ. ಮಳೆಯ ಹೊರತಾಗಿಯೂ ಉತ್ತರ ಕರ್ನಾಟಕದ ಕಲಬುರಗಿ, ರಾಯಚೂರು, ಬಳ್ಳಾರಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ತಾಪಮಾನ 40-44 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದ್ದು ಬಿಸಿಗಾಳಿ ಅಬ್ಬರ ಮುಂದುವರಿದಿದೆ.

# ಕೆಕೆಆರ್‌ಗೆ ಜಯ: ಪ್ಲೇಆಫ್ ಆಸೆ ಜೀವಂತ

• ಪ್ರಜೋದಯ ವರದಿ

**ಹೈದರಾಬಾದ್:** ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್) ಟೂರ್ನಿಯ 45ನೇ ಪಂದ್ಯದಲ್ಲಿ ಅಜಿಂಕ್ಯ ರಹಾನೆ, ಅಂಗ್‌ಕ್ರಿಷ್ ರಘುವಂಶಿ ಅವರ ಬ್ಯಾಟಿಂಗ್ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್(ಎಸ್‌ಆರ್‌ಎಚ್) ವಿರುದ್ಧ ಕೋಲ್ಕತ್ತಾ ನೈಟ್ ರೈಡರ್ಸ್ (ಕೆಕೆಆರ್) ತಂಡವು 7 ವಿಕೆಟ್‌ಗಳ ಗೆಲುವು ಸಾಧಿಸಿದೆ.





ಹೈದರಾಬಾದ್‌ನ ರಾಜೀವ್ ಗಾಂಧಿ ಅಂತರರಾಷ್ಟ್ರೀಯ ಮೈದಾನ ದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಎಸ್‌ಆರ್‌ಎಚ್ ತಂಡವು ಟ್ರಾವಿಸ್ ಹೆಡ್ (61 ರನ್, 28 ಎಸೆತ) ಹಾಗೂ ಇಶಾನ್ ಕಿಶನ್ (42 ರನ್, 29 ಎಸೆತ) ಅವರ ಬ್ಯಾಟಿಂಗ್ ನೆರವಿನಿಂದ 19 ಓವರ್‌ಗಳ ಅಂತ್ಯಕ್ಕೆ 165 ರನ್‌ಗಳಿಸಿ ಆಲೌಟ್ ಆಯಿತು.

ಎಸ್‌ಆರ್‌ಎಚ್‌ನ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು. ಉತ್ತಮ ಲಯದಲ್ಲಿದ್ದ ಹೆನ್ರಿಚ್ ಕ್ಲಾಸೆನ್ 11, ಕನ್ನಡಿಗ ಸಮ್ರಾನ್ ರವಿಚಂದ್ರನ್ 4, ಅನಿಕೇತ್ ವರ್ಮಾ 6, ಸಲೀಲ್ ಆರೋರ 2, ನಾಯಕ ಕಮಿನ್ಸ್ 10 ರನ್ ಗಳಿಸಿದರು.

ಕೆಕೆಆರ್ ಪರ ವರುಣ್ ಚಕ್ರವರ್ತಿ 3, ಸುನಿಲ್ ನಾರಾಯಣ್, ಕಾರ್ತಿಕ್ ತ್ಯಾಗಿ 2, ವೈಭವ್ ಆರೋರ, ಗ್ರೀನ್, ಅಂಕುಲ್ ರಾಯ್ ತಲಾ 1 ವಿಕೆಟ್ ಕಬಳಿಸಿದರು.

166 ರನ್ ಗುರಿ ಬೆನ್ನತ್ತಿದ ಕೆಕೆಆರ್‌ಗೆ ಆರಂಭಿಕ ಫಿನ್ ಅಲೆನ್ ಸ್ಫೋಟಕ ಆರಂಭ ಒದಗಿಸಿದರು. 13 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್ ಸಹಿತ 29 ರನ್ ಗಳಿಸಿ, ಪ್ಯಾಟ್ ಕಮಿನ್ಸ್‌ಗೆ ವಿಕೆಟ್ ಒಪ್ಪಿಸಿದರು.





ನಾಯಕ ಅಜಿಂಕ್ಯ ರಹಾನೆ (43 ರನ್, 36 ಎಸೆತ) ಹಾಗೂ ಅಂಗ್‌ಕ್ರಿಷ್ ರಘುವಂಶಿ (59 ರನ್, 47 ಎಸೆತ) 2ನೇ ವಿಕೆಟ್‌ಗೆ 84 ರನ್‌ಗಳ ಜೊತೆಯಾಟವಾಡಿದರು. ಕೆಕೆಆರ್ ತಂಡವು 18.2 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ169 ರನ್‌ಗಳಿಸುವ ಮೂಲಕ 10 ಎಸೆತಗಳು ಬಾಕಿ ಇರುವಂತೆಯೇ ಗೆಲುವಿನ ಗಡಿ ದಾಟಿತು. ಈ ಗೆಲುವಿನ ಮೂಲಕ ಕೆಕೆಆರ್ ತಂಡವು 9 ಪಂದ್ಯಗಳಲ್ಲಿ 7 ಅಂಕಗಳೊಂದಿಗೆ 8 ಸ್ಥಾನದಲ್ಲಿದ್ದು, ಪ್ಲೇಆಫ್ ಆಸೆ ಜೀವಂತವಾಗಿದೆ.

# ವೈಭವದ ದಿಂಡಗೂರಿನಲ್ಲಿ ಶೆಟ್ಟಳಮ್ಮ ದೇವಿ ರಥೋತ್ಸವ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ದಿಂಡಗೂರು ಗ್ರಾಮದೇವತೆ ಶ್ರೀ ಶೆಟ್ಟಳಮ್ಮ ದೇವಿಯ ಹಬ್ಬದ ಪ್ರಯುಕ್ತ ಭಾನುವಾರ ವಿಜೃಂಭಣೆ ರಥೋತ್ಸವ ನಡೆಯಿತು.



ದೇವಾಲಯಕ್ಕೆ ಹಸಿರು ಚಪ್ಪರ ಹಾಕಿ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಗ್ರಾಮದ ಪ್ರತಿ ರಸ್ತೆಯನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಮುಂಜಾನೆಯಿಂದಲೇ ದೇವಾಲಯದಲ್ಲಿ ಪೂಜಾ ವಿಧಿ ವಿಧಾನಗಳು ಪ್ರಾರಂಭವಾಗಿ ದೇವಿಗೆ ಕುಂಕುಮಾರ್ಚನೆ, ಪುಷ್ಪಾರ್ಚನೆ ಬಳಿಕ ವಿವಿಧ ಬಗೆಯ ಒಡವೆ ಹಾಗು ವಸ್ತ್ರಗಳಿಂದ ದೇವಿಯ ಉತ್ಸವ ಮೂರ್ತಿಯನ್ನು ಸಿಂಗರಿಸಲಾಯಿತು. ಜೊತೆಗೆ ವಿವಿಧ ಪುಷ್ಪಗಳಿಂದ ರಥವನ್ನು ಅಲಂಕರಿಸಲಾಯಿತು.

ಮಧ್ಯಾಹ್ನ 12 ಗಂಟೆಗೆ ದೇವಿಯ ಅಡ್ಡಪಲ್ಲಕ್ಕಿ ಉತ್ಸವವು ಮೂಲ ದೇವಾಲಯದಿಂದ ಪ್ರಾರಂಭಗೊಂಡು ಪ್ರಮುಖ ಬೀದಿಗಳಲ್ಲಿ ಸಾಗಿತು. ಉತ್ಸವ ಸಾಗಿದಂತೆಲ್ಲ ಹೆಣ್ಣು ಮಕ್ಕಳು ಹಣ್ಣು ಕಾಯಿ ಅರ್ಪಿಸಿ ಆರತಿ ಬೆಳಗಿಸಿದರು. ಭಕ್ತರು ಈಡು ಗಾಯಿ ಒಡೆದು ಭಕ್ತಿ ಭಾವದಲ್ಲಿ ತೇಲಿದರು.

ತಾಯಂದಿರು ದೇವಿಯ ಮೇಲಿನ ಸೋಬಾನೆ ಪದ ಹಾಡಿದರೆ, ದೇವಿಯ ಮಕ್ಕಳಾದ ಕೆಂಚರಾಯ ಹಾಗು ಭೂತರಾಯ ಸೋಮಗಳ ಕುಣಿತ ಉತ್ಸವಕ್ಕೆ ಮೆರುಗು ನೀಡಿತು. ಮಧ್ಯಾಹ್ನ 2.30ರಲ್ಲಿ ದೇವಿಯನ್ನು ಸಿಂಗರಿಸಿದ್ದ ರಥದ ಮೇಲೆ ಪ್ರತಿಷ್ಠಾಪಿಸಲಾಯಿತು. ಪ್ರಧಾನ ಅರ್ಚಕರು ವಿಶೇಷ ಪೂಜೆ ಸಲ್ಲಿಸಿದ ಬಳಿಕ ಭೂತರಾಯ ಸೋಮ ಬಾಳೆಕಂದನ್ನು ವೀರಗತ್ತಿಯಿಂದ ಕತ್ತರಿಸುತ್ತಿದ್ದಂತೆ ಭಕ್ತರು ಜೈಕಾರದೊಂದಿಗೆ ರಥ ಎಳೆದರು. ರಥವು ಮುಂದೆ ಸಾಗುತ್ತಿದ್ದಂತೆಯೇ ಬಾಳೆಹಣ್ಣು, ಹೂವು, ಪತ್ರೆ ಹಾಗು ದವನ ಎಸೆಯುವ ಮೂಲಕ ಭಕ್ತರು ತಮ್ಮ ಹರಕೆ ತೀರಿಸಿದರು.

ನಂತರ ಸಿಡಿ ಕಂಬದ ಬೀದಿಯಲ್ಲಿ ಅನ್ನದಾಸೋಹ ನಡೆಯಿತು. ಸುತ್ತಮುತ್ತಲ ಗ್ರಾಮಸ್ಥರು ದೇವಿಯ ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

# ಹೊಸಪೇಟೆ ತುಂಗಭದ್ರಾ ಜಲಾಶಯಕ್ಕೆ ಡಿ.ಕೆ.ಶಿ. ಭೇಟಿ

• ಪ್ರಜೋದಯ ವರದಿ


**ವಿಜಯನಗರ :** ಜಿಲ್ಲೆಯ ಹೊಸಪೇಟೆಯಲ್ಲಿರುವ ತುಂಗಭದ್ರಾ ಜಲಾಶಯಕ್ಕೆ ಭಾನುವಾರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಲಾಶಯದ 19ನೇ ಕ್ರಸ್ಟ್ ಗೇಟ್ ಮುರಿದು ಹೊಸ ಗೇಟ್ ಅಳವಡಿಸಿದ ನಂತರ ಇದೇ ಮೊದಲ ಬಾರಿಗೆ ಅವರು ಡ್ಯಾಂಗೆ ಆಗಮಿಸಿದ್ದಾರೆ. ಜಲಾಶಯದ ಹೊಸ ಕ್ರಸ್ಟ್ ಗೇಟ್ ನಿರ್ಮಾಣ ಕಾಮಗಾರಿಯನ್ನು ಕೂಲಂಕಷವಾಗಿ ವೀಕ್ಷಿಸಿದ ಡಿ.ಕೆ. ಶಿವಕುಮಾರ್ ಅವರಿಗೆ ಡ್ಯಾಂ ಆಡಳಿತ ಮಂಡಳಿ ಅಧಿಕಾರಿಗಳು ಪ್ರಾಯೋಗಿಕ ಪರೀಕ್ಷೆಯನ್ನು ತೋರಿಸಿದರು.

ಎರಡು ವರ್ಷಗಳ ಹಿಂದೆ ಜಲಾಶಯದ 19ನೇ ನಂಬರಿನ ಕ್ರಸ್ಟ್ ಗೇಟ್ ಮುರಿದಿತ್ತು. ಈ ವೇಳೆ 19ನೇ ಕ್ರಸ್ಟ್ ಗೇಟ್‌ನ್ನು ಮೇಲಕ್ಕೆ ಎತ್ತುವ ಮೂಲಕ ಗೇಟ್ ಕಾರ್ಯ ನಿರ್ವಹಣೆಯ ಬಗ್ಗೆ ಮಾಹಿತಿ ನೀಡ ಲಾಯಿತು. ಯಶಸ್ವಿಯಾಗಿ ಪೂರ್ಣಗೊಂಡ ಡ್ಯಾಂ ಗೇಟ್ ಅಳವಡಿಕೆ ಕಾರ್ಯ ನಡೆದಿತ್ತು.

**▪ 33 ಹೊಸ ಕ್ರಸ್ಟ್‌ಗೇಟ್ ಅಳವಡಿಕೆ ವೀಕ್ಷಣೆ**

ಡಿ.ಕೆ. ಶಿವಕುಮಾರ್ ಅವರು ಯುದ್ಧೋಪಾದಿಯಲ್ಲಿ ಹೊಸ ಗೇಟ್ ಅಳವಡಿಸುವ ಭರವಸೆ ನೀಡಿದ್ದರು. ಇಂಜಿನೀಯರ್‌ಗಳ ನಿರಂತರ ಪರಿಶ್ರಮದಿಂದಾಗಿ ಈ ಕಾರ್ಯ ಯಶಸ್ವಿಯಾಗಿ ಪೂರ್ಣಗೊಂಡಿದೆ. ಈ ಸಂದರ್ಭದಲ್ಲಿ ಸಚಿವರಾದ ಎನ್.ಎಸ್.ಬೋಸರಾಜು ಮತ್ತು ಶಿವರಾಜ್ ತಂಗಡಗಿ ಇದ್ದರು.



# ರಾಹುಲ್ ಗಾಂಧಿ ವೋಟ್ ಚೋರ : ಅಶೋಕ್ ವ್ಯಂಗ್ಯ

• ಪ್ರಜೋದಯ ವರದಿ

**ಬೆಂಗಳೂರು :** ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಮತ ಎಣಿಕೆಯಲ್ಲಿ ಬಿಜೆಪಿಯ ಜೀವರಾಜ್‌ಗೆ ಮುನ್ನಡೆ ಸಿಕ್ಕಿರುವುದು ಸತ್ಯಕ್ಕೆ ಜಯವಾಗಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸಂತಸ ವ್ಯಕ್ತಪಡಿಸಿದ್ದಾರೆ.



ಸಾಮಾಜಿಕ ಜಾಲತಾಣದಲ್ಲಿ ಪ್ರತಿ ಕ್ರಿಯಿ ಸಿರುವ ಅವರು, ಶೃಂಗೇರಿಯಲ್ಲಿ ಕಾಂಗ್ರೆಸ್ ಅಸಿಂಧು. ಸತ್ಯಕ್ಕೆ ಜಯವಾಗಿದೆ. ವೋಟ್ ಚೋರ್ ಕೌನ್ ಹೈ ರಾಹುಲ್ ಗಾಂಧಿ ಹೈ ಎಂದು ಬರೆದಿದ್ದಾರೆ. ಶೃಂಗೇರಿ ವಿಧಾನಸಭಾ ಕ್ಷೇತ್ರದ ಮರು ಎಣಿಕೆ ಫಲಿತಾಂಶ ಕಾಂಗ್ರೆಸ್ ಪಕ್ಷದ ಕರಾಳ ಮುಖವನ್ನ ಮತ್ತೊಮ್ಮೆ ಬಯಲು ಮಾಡಿದೆ. ಜನಾದೇಶಕ್ಕೆ ಮೋಸ ಮಾಡಿ ಅಕ್ರಮವಾಗಿ ಗೆಲುವು ಸಾಧಿಸಲು ಅಧಿ ಕಾರ ದುರ್ಬಳಕೆ ಮಾಡಿಕೊಂಡ ಕಾಂಗ್ರೆಸ್ ಪಕ್ಷಕ್ಕೆ ನ್ಯಾಯಾಂಗ ನೀಡಿದ ತಕ್ಕ ಉತ್ತರವಾಗಿದೆ ಎಂದಿದ್ದಾರೆ

2023ರ ಚುನಾವಣೆಯಲ್ಲಿ 279 ಅಂಚೆ ಮತಗಳನ್ನು ಅಕ್ರಮವಾಗಿ ತಿರಸ್ಕರಿಸುವ ಮೂಲಕ ಜನಾದೇಶವನ್ನು ಕಸಿದುಕೊಳ್ಳಲಾಗಿತ್ತು. ಅಂದು ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ಅವರ ಮನವಿಯನ್ನು ತಿರಸ್ಕರಿಸಿ ಕಾಂಗ್ರೆಸ್‌ನ ಟಿ.ಡಿ. ರಾಜೇಗೌಡ'ರನ್ನು ವಿಜೇತ ರೆಂದು ಘೋಷಿಸಲಾಗಿತ್ತು. ಅಧಿಕಾರ ಬಲಕ್ಕೆ ಮಣಿಯದ ಜೀವರಾಜ್ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ನ್ಯಾಯಮೂರ್ತಿ ಆರ್.ನಟರಾಜ್ ಅವರ ಪೀಠ ನೀಡಿದ ಐತಿಹಾಸಿಕ ಆದೇಶದಂತೆ ನಿನ್ನೆ ಮರು ಎಣಿಕೆ ನಡೆಯಿತು. ಕಾಂಗ್ರೆಸ್ ಪಕ್ಷದ ಮೋಸ ಬಯಲಾಗಿದೆ ಎಂದಿದ್ದಾರೆ.

ಕಳೆದ ಮೂರು ವರ್ಷಗಳಿಂದ ಅನರ್ಹವಾಗಿ ಅಧಿಕಾರ ಅನುಭವಿಸಿದ ಕಾಂಗ್ರೆಸ್‌ಗೆ ಈಗ ಮುಖಭಂಗವಾಗಿದೆ. ಇದು ಕೇವಲ ಒಬ್ಬ ವ್ಯಕ್ತಿಯ ಗೆಲುವಲ್ಲ, ಇದು ಪ್ರಜಾಪ್ರಭುತ್ವದ ಗೆಲುವು. ಶೃಂಗೇರಿಯ ಮತದಾರರ ಮತದ ಮೌಲ್ಯಕ್ಕೆ ಸಂದ ಜಯ ಎಂದು ಹೇಳಿದ್ದಾರೆ.

ನ್ಯಾಯದೇವತೆಯ ಮೇಲೆ ವಿಶ್ವಾಸವಿಟ್ಟು ಸಂವಿಧಾನಾತ್ಮಕವಾಗಿ ಹೋರಾಡಿ ನ್ಯಾಯ ಪಡೆದ ಡಿ.ಎನ್. ಜೀವರಾಜ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಸತ್ಯಮೇವ ಜಯತೇ ಎಂದು ಹೇಳಿದ್ದಾರೆ.

# ನಾಯಕತ್ವ ಪಟ್ಟು: ಅಸಲಿ ಆಟ ಶುರು

» ಮೊದಲನೇ ಪುಟದಿಂದ

ಮುಖ್ಯಮಂತ್ರಿ ಮಾಡಬೇಕೆಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಹಾಗು ಶಾಸಕ ಬಸವರಾಜ ರಾಯರಡ್ಡಿ ಅವರು ಹೇಳಿದ್ದಾರೆ.

ಕೊಪ್ಪಳ ತಾಲ್ಲೂಕಿನ ಕೋಳೂರು ಕಾಟ್ರಳ್ಳಿಯಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕಳೆದ ವಾರ ಖರ್ಗೆ ಅವರನ್ನು ಭೇಟಿಯಾಗಿ ರಾಜಕೀಯ ವಿಚಾರಗಳನ್ನು ಚರ್ಚಿಸಿದ್ದೇನೆ. ರಾಜ್ಯದಲ್ಲಿ ಅನಗತ್ಯವಾಗಿ ಸೃಷ್ಟಿಯಾಗುತ್ತಿರುವ ಗೊಂದಲಗಳಿಗೆ ಅಂತ್ಯ ಹಾಡಬೇಕೆಂದು ಮನವಿ ಮಾಡಿದ್ದೇನೆ. ಸಚಿವ ಸಂಪುಟ ಪುನರ್ ರಚನೆ ಮಾಡಿ 25 ಮಂದಿ ಸಚಿವರನ್ನು ತೆಗೆದು ಹೊಸಬರು ಹಾಗು ಹಿರಿಯರಿಗೆ ಅವಕಾಶ ಕೊಡುವಂತೆ ಕೇಳಿದ್ದೇನೆಂದರು.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬಾರದೆಂದು ನಾನು ಹೇಳಿಲ್ಲ, ಮುಖ್ಯಮಂತ್ರಿ ಆಗುತ್ತೇನೆಂದು ಶಿವಕುಮಾರ್ ಎಲ್ಲಿಯಾದರೂ ಹೇಳಿದ್ದಾರೆಯೇ ಎಂದು ಪ್ರಶ್ನಿಸಿದ ರಾಯರಡ್ಡಿ ನಾನು ಯಾರ ಬೆಂಬಲಿಗನೂ ಅಲ್ಲ, ಕಾಂಗ್ರೆಸ್ ಪಕ್ಷದ ಬೆಂಬಲಿಗ. ಸಿದ್ದರಾಮಯ್ಯನವರ ಆಡಳಿತ ವೈಖರಿ ಚೆನ್ನಾಗಿದ್ದು, ಅವರ ಬಗ್ಗೆ ಪ್ರೀತಿ ಇದೆ. ಅವರ ಪರವಾಗಿ ಮಾತನಾಡುತ್ತೇನೆಂದು ಹೇಳಿದರು.

ನೀವು ಸಚಿವ ಸ್ಥಾನದ ಆಕಾಂಕ್ಷಿಯೇ ಎನ್ನುವ ಪ್ರಶ್ನೆಗೆ ನನಗೆ ಪ್ರಧಾನಿಯಾಗುವ ಆಸೆಯಿದೆ ಎಂದರು. ಸಚಿವನನ್ನಾಗಿ ಮಾಡುವುದನ್ನು ಪಕ್ಷ ತೀರ್ಮಾನಿಸುತ್ತದೆ. ಆದರೆ ಸಚಿವ ಸ್ಥಾನ ನೀಡುವಂತೆ ಖರ್ಗೆ ಅವರ ಬಳಿ ಕೇಳಿಲ್ಲವೆಂದು ತಿಳಿಸಿದರು.

# 8 ಲಕ್ಷ ಜನರ ಬಳಕೆಯ ನೀರು ಎಐ ಒಂದಕ್ಕೇ ಮೀಸಲು: ಆತಂಕ

• ಪ್ರಜೋದಯ ವರದಿ

**ನವದೆಹಲಿ:** ಕೃತಕ ಬುದ್ಧಿಮತ್ತೆ (ಎಐ) ಹಾಗು ಕ್ಲೌಡ್ ಕಂಪ್ಯೂಟಿಂಗ್ ವಲಯಗಳಿಂದ ಭಾರತದಲ್ಲಿ ವಾರ್ಷಿಕ 3,750 ಕೋಟಿ ಲೀಟರ್ ನೀರು ಬಳಕೆ ಮಾಡಲಾಗುತ್ತಿದೆ. ಇದು 7 ರಿಂದ 8 ಲಕ್ಷ ಜನರ ವಾರ್ಷಿಕ ನೀರಿನ ಬಳಕೆಗೆ ಸಮನಾಗಿದೆ ಎಂದು ಪರಿಸರ ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.

ಮುಂಬೈನಂತಹ ಮಹಾನಗರವು ಒಂದು ವಾರ ಬಳಸಬಹುದಾದ ನೀರನ್ನು ಎಐ ಹಾಗು ಕ್ಲೌಡ್ ಕಂಪ್ಯೂಟಿಂಗ್ ವಲಯಗಳು ವಾರ್ಷಿಕವಾಗಿ ವ್ಯತ್ಯಯ ಮಾಡುತ್ತಿವೆ ಎಂದು ನಟ್‌ಕನೆಕ್ಟ್ ಫೌಂಡೇಶನ್ ತಿಳಿಸಿದೆ.

ನಟ್‌ಕನೆಕ್ಟ್ ನಿರ್ದೇಶಕ ಬಿ.ಎನ್.ಕುಮಾರ್ ಅವರು ಕಳೆದ ತಿಂಗಳು ಪ್ರಧಾನ ಮಂತ್ರಿ ಕಚೇರಿಗೆ ಬರೆದಿದ್ದ ಪತ್ರದಲ್ಲಿ, ಕೈಗಾರಿಕೆಗಳ ಬೆಳವಣಿಗೆಯು ಭಾರತದಲ್ಲಿ ನೀರಿನ ಅಭಾವಕ್ಕೆ ಕಾರಣವಾಗಬಹುದೆಂದು ತಿಳಿಸಿದ್ದರು. ಆ ಪತ್ರಕ್ಕೆ ಉತ್ತರ ನೀಡಿರುವ ಜಲಶಕ್ತಿ ಸಚಿವಾಲಯವು, ದೇಶದ ಡೇಟಾ ಸೆಂಟರ್ ಬಳಕೆಯು 2020 ರಲ್ಲಿ 375 ಮೆಗಾವ್ಯಾಟ್ ಇತ್ತು. 2025ರಲ್ಲಿ ಅದು 1,500 ಮೆಗಾವ್ಯಾಟ್‌ಗೆ ಏರಿಕೆ ಯಾಗಿದೆ. ಆ ಡೇಟಾ ಸೆಂಟರ್‌ಗಳು ಡೆರೆಕ್ಟ್‌ಟುಚಿಪ್ ಲಿಕ್ವಿಡ್ ಕೂಲಿಂಗ್, ಅಡಿಯಾ ಬ್ಯಾಟಿಕ್ ಕೂಲಿಂಗ್ ಮುಂತಾದ ಆಧುನಿಕ ತಂತ್ರಜ್ಞಾನದ ಮೂಲಕ ನೀರು ಮತ್ತು ಇಂಧನ ಬಳಕೆಯನ್ನು ಕಡಿಮೆ ಮಾಡುತ್ತಿವೆ ಎಂದು ಹೇಳಿದೆ.

ನೀರಿನ ಬಳಕೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಆಧುನಿಕ ಕೂಲಿಂಗ್ ತಂತ್ರಜ್ಞಾನಗಳನ್ನು ಕೈಗಾರಿಕೆಗಳು ಬಳಸಬೇಕು. ಅದರೊಂದಿಗೆ ನೀರನ್ನು ಉಳಿತಾಯ ಮಾಡುವ ಉದ್ದೇಶದಿಂದ ಮಳೆನೀರು ಕೊಯ್ಲು, ತ್ಯಾಜ್ಯ ನೀರಿನ ಮರುಬಳಕೆ ಮಾಡಬೇಕಿದೆ ಎಂದು ತಿಳಿಸಿದೆ.

# ಅಮೇರಿಕಾದ ಫೈಟರ್ ಜೆಟ್ ಖರೀದಿಸುವ ಒಪ್ಪಂದಕ್ಕೆ ಇಸ್ರೇಲ್ ಸಹಿ

• ಪ್ರಜೋದಯ ವರದಿ

**ಜೆರುಸಲೇಂ:** ಅಮೇರಿಕಾದೊಂದಿಗಿನ ಎರಡು ಫೈಟರ್ ಜೆಟ್‌ಗಳ ಯುದ್ಧ ಸ್ಕ್ವಾಡ್ರನ್‌ಗಳನ್ನು ಖರೀದಿಸುವ ಬಹುಕೋಟಿ ಒಪ್ಪಂದಕ್ಕೆ ಅನುಮತಿ ನೀಡಲಾಗಿದೆ ಎಂದು ಭಾನುವಾರ (ಮೇ 3) ಇಸ್ರೇಲ್ ತಿಳಿಸಿದೆ.



ಲಾಕ್ಹೀಡ್ ಮಾರ್ಟಿನ್ ತಯಾರಿಸಿರುವ ಎಫ್-35 ಯುದ್ಧ ವಿಮಾನ ಹಾಗೂ ಬೋಯಿಂಗ್‌ನ ಎಫ್-15ಐಎ ಯುದ್ಧ ವಿಮಾನಗಳು ಈ ಖರೀದಿ ಒಪ್ಪಂದದ ಭಾಗವಾಗಿವೆ ಎಂದು ಇಸ್ರೇಲ್‌ನ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ತಿಳಿಸಿದ್ದಾರೆ.

ಇಸ್ರೇಲ್ ವಾಯುಪಡೆಯ ಬಲವನ್ನು ಹೆಚ್ಚಿಸುವ ಉದ್ದೇಶದಿಂದ ಈ ಖರೀದಿಗೆ ಮುಂದಾಗಿದ್ದು, ಇದು ಶೀಲ್ಡ್ ಆಫ್ ಇಸ್ರೇಲ್ ಯೋಜನೆಯ ಭಾಗವಾಗಿದೆ. ಉತ್ತಮ ಆಯುಧಗಳನ್ನು ಹೊಂದುವ ಮೂಲಕ, ಯಾವುದೇ ಸ್ಥಳದಿಂದ, ಯಾವಾಗ ಬೇಕಾದರೂ ಯುದ್ಧ ಮಾಡುವ ಸಾಮರ್ಥ್ಯವನ್ನು ನಾವು ಸಾಧಿಸಲು ಇದು ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

ಗಾಜಾ ಮೇಲಿನ ದಾಳಿಯ ಸಂದರ್ಭದಲ್ಲಿ ಇಸ್ರೇಲ್ ವಾಯುಪಡೆಯು ಪ್ರಮುಖ ಪಾತ್ರವಹಿಸಿತ್ತು. ಹಮಾಸ್‌ನ ನೆಲೆಗಳು, ಸುರಂಗ, ಬಂಕರ್ ಕಮಾಂಡಿಗ್ ಸೆಂಟರ್ ಸೇರಿ ಪ್ರಮುಖ ಸ್ಥಳಗಳ ಮೇಲೆ ವಾಯುಪಡೆಯ ಮೂಲಕ ದಾಳಿ ನಡೆಸಿತ್ತು.

ಎಫ್-35 ಯುದ್ಧ ವಿಮಾನವು ಜಗತ್ತಿನ ಅತ್ಯಾಧುನಿಕ ಯುದ್ಧ ವಿಮಾನಗಳಲ್ಲಿ ಒಂದಾಗಿದೆ. ಹಾಗಾಗಿ, ಅದರ ಖರೀದಿಗೆ ಇಸ್ರೇಲ್ ಮುಂದಾಗಿತ್ತು. ಇತ್ತೀಚೆಗೆ ಮಂಡಿಸಿದ್ದ ಬಜೆಟ್‌ನಲ್ಲಿ ರಕ್ಷಣಾ ವೆಚ್ಚವನ್ನು ಹೆಚ್ಚಿಸಲಾಗಿತ್ತು. ಇರಾನ್‌ನೊಂದಿಗಿನ ಅಮೇರಿಕಾ-ಇಸ್ರೇಲ್ ಘರ್ಷಣೆಯ ನಡುವೆಯೇ ಈ ಬೆಳವಣಿಗೆ ನಡೆದಿರುವುದು, ಪಶ್ಚಿಮ ಏಷ್ಯಾ ರಾಷ್ಟ್ರದಲ್ಲಿ ಶಾಶ್ವತ ಕದನವಿರಾಮಕ್ಕೆ ಅಡ್ಡಿಯಾಗುವ ಸಾಧ್ಯತೆಯಿದೆ.

# ಸಿ.ಎಂ. ಆಯ್ಕೆ ಕಾಂಗ್ರೆಸ್ ವಿವೇಚನೆಗೆ ಬಿಟ್ಟ ಯುಡಿಎಫ್

• ಪ್ರಜೋದಯ ವರದಿ

**ತಿರುವನಂತಪುರ:** ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ಅಭ್ಯರ್ಥಿಯ ಆಯ್ಕೆಯ ನಿರ್ಧಾರವನ್ನು ಕಾಂಗ್ರೆಸ್ ಪಕ್ಷಕ್ಕೆ ನೀಡಲಾಗುತ್ತದೆಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ಕೇರಳ ಉಸ್ತುವಾರಿ ದೀಪಾ ದಾಸ್‌ಮುನ್ಷಿ ಭಾನುವಾರ ಹೇಳಿದ್ದಾರೆ.

ಈ ವಿಷಯದ ಬಗ್ಗೆ ಮೈತ್ರಿಕೂಟದ ಪಕ್ಷಗಳೊಂದಿಗೆ ಚರ್ಚೆ ನಡೆಸಲಾಗಿದೆ. ಅವರು ಕಾಂಗ್ರೆಸ್ ಪಕ್ಷದ ನಿರ್ಧಾರಕ್ಕೆ ಬದ್ಧರಾಗಿರಲು ಒಪ್ಪಿದ್ದಾರೆಂದು ಹೇಳಿದ್ದಾರೆ. ಮಿತ್ರಪಕ್ಷದ ನಾಯಕರೊಂದಿಗೆ ಸಮಾಲೋಚನೆ ನಡೆಸಿದ್ದೇವೆ. ಕಾಂಗ್ರೆಸ್ ಯಾವುದೇ ನಿರ್ಧಾರ ತೆಗೆದುಕೊಂಡರೂ, ಅದನ್ನು ಒಪ್ಪುತ್ತೇವೆಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆಂದರು.

ಕಾಂಗ್ರೆಸ್ ಪಕ್ಷ ಮತ್ತು ಮಿತ್ರ ಪಕ್ಷಗಳಲ್ಲಿ, ಎಲ್ಲರಿಗೂ ಒಂದು ಕಾರ್ಯವಿಧಾನವಿದೆ. ಫಲಿತಾಂಶ ಪ್ರಕಟವಾದ ನಂತರ, ಪಕ್ಷವು ತನ್ನ ಪ್ರಕ್ರಿಯೆಯನ್ನು ಅನುಸರಿಸುತ್ತದೆ. ಚುನಾಯಿತ ಶಾಸಕರೊಂದಿಗೆ ಸಮಾಲೋಚನೆ ನಡೆಸಿದ ನಂತರ ಹೈಕಮಾಂಡ್ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುತ್ತದೆಂದರು.

ಯುಡಿಎಫ್ ಮೈತ್ರಿಕೂಟದ ಮುಖ್ಯಮಂತ್ರಿ ಅಭ್ಯರ್ಥಿಯ ಬಗ್ಗೆ ಪಕ್ಷದೊಳಗಿನ ಚರ್ಚೆಗಳಿಗಿಂತ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆ ನಡೆಯುತ್ತಿದೆ ಎಂದು ದಾಸ್‌ಮುನ್ಷಿ ಹೇಳಿದರು. ಚುನಾವಣಾ ಫಲಿತಾಂಶಕ್ಕೂ ಮುನ್ನವೇ ಕೇರಳ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಅಭ್ಯರ್ಥಿ ಬಗ್ಗೆ ಚರ್ಚೆ ಹೆಚ್ಚಾಗುತ್ತಿದೆ. ಮುಖ್ಯಮಂತ್ರಿ ಸ್ಥಾನಕ್ಕೆ ಪಕ್ಷದ ಹಿರಿಯ ನಾಯಕರಾದ ವಿ.ಡಿ ಸತೀಶನ್, ರಮೇಶ್ ಚೆನ್ನಿತ್ತಲ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹೆಸರುಗಳು ಕೇಳಿ ಬರುತ್ತಿವೆ. ಕೇರಳದಲ್ಲಿ ವಿಧಾನ ಸಭಾ ಚುನಾವಣೆ ಏಪ್ರಿಲ್ 9 ರಂದು ನಡೆದಿದ್ದು, ಮೇ 4 ರಂದು ಫಲಿತಾಂಶ ಪ್ರಕಟವಾಗಲಿದೆ.

# ಯುದ್ಧದ ನಂತರ ವಾಣಿಜ್ಯ ಸಿಲಿಂಡರ್ ದರ ಇಳಿಕೆ

» ಮೊದಲನೇ ಪುಟದಿಂದ

ನೀಡಿದೆ. ಈ ಅಧಿಕಾರ ಬಳಸಿಕೊಂಡು ಕಂಪೆನಿಗಳು ನಿರ್ಧಾರ ಕೈಗೊಳ್ಳುತ್ತಿವೆ. ಆದರೂ ಗೃಹ ಬಳಕೆ ಎಲ್‌ಪಿಜಿ, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಯಾಗದಂತೆ ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದೆ ಎಂದರು.

ಭಾರತಕ್ಕೆ ಅಗತ್ಯವಿರುವ ಶೇ. 50 ರಷ್ಟು ಇಂಧನ ವಿದೇಶದಿಂದ ಆಮದು ಆಗುತ್ತದೆ. ಹೊರ್ಮುಜ್ ಜಲಸಂಧಿಯ ಮೂಲಕವೇ ಹೆಚ್ಚಿನ ಇಂಧನ ಬರುತ್ತದೆ. ಹೊರ್ಮುಜ್ ಜಲಸಂಧಿಯ ಸಮಸ್ಯೆ ಬಗೆಹರಿದರೆ ಎಲ್ಲವೂ ಸರಿ ಹೋಗುತ್ತದೆ ಎಂದು ಹೇಳಿದರು.

**ಸರ್ಕಾರದ ವಿರುದ್ಧ ವಾಗ್ದಾಳಿ**

ರಾಜ್ಯದಲ್ಲಿ ಅಧಿಕಾರ ಹಂಚಿಕೆಯ ಗೊಂದಲದಿಂದ ಭ್ರಷ್ಟಾಚಾರ ಮಿತಿ ಮೀರಿದೆ. ಸರ್ಕಾರಿ ನೌಕರರಿಗೆ ವೇತನ ನೀಡಲು ಹಣ ಇಲ್ಲದಂತಹ ಪರಿಸ್ಥಿತಿ ರೂಪುಗೊಂಡಿದೆ ಎಂದು ಟೀಕಿಸಿದರು.

ಉಪಮುಖ್ಯಮಂತ್ರಿ ಶಿವಕುಮಾರ್ ರವರನ್ನು ಮುಖ್ಯಮಂತ್ರಿಯನ್ನಾಗಿಸುವ ಚರ್ಚೆಯನ್ನು ಕಾಂಗ್ರೆಸ್ ಹೈಕಮಾಂಡ್ ಆರಂಭಿಸಿದೆ. ಕಾಂಗ್ರೆಸ್ ಯಾರನ್ನೇ ಮುಖ್ಯಮಂತ್ರಿ ಮಾಡುವ ನಿರ್ಧಾರ ಕೈಗೊಂಡರೂ ಅದಕ್ಕೂ ನಮಗೂ ಸಂಬಂಧವಿಲ್ಲವೆಂದು ಹೇಳಿದರು.

# ದೃಷ್ಟಿ ಉಪಗ್ರಹ ಯಶಸ್ವಿ ಉಡ್ಡಯನ

• ಪ್ರಜೋದಯ ವರದಿ

**ನವದೆಹಲಿ:** ಬೆಂಗಳೂರು ಮೂಲದ ಬಾಹ್ಯಾಕಾಶ ಸ್ಟಾರ್ಟ್‌ಅಪ್ ಗ್ಯಾಲಕ್ಸ್ ಐ ಅಭಿವೃದ್ಧಿ ಪಡಿಸಿರುವ ಮಿಷನ್ ದೃಷ್ಟಿ ಉಪಗ್ರಹವನ್ನು ಭಾನುವಾರ ಕ್ಯಾಲಿಫೋರ್ನಿಯಾದಿಂದ ಸ್ಪೇಸ್‌ಎಕ್ಸ್‌ನ ಫಾಲ್ಕನ್ 9 ರಾಕೆಟ್ ಮೂಲಕ ಯಶಸ್ವಿಯಾಗಿ ಉಡ್ಡಯನ ಮಾಡಲಾಗಿದೆ.



ಸಂಸ್ಥೆಯ ಪ್ರಕಾರ, ದೃಷ್ಟಿ ವಿಶ್ವದ ಮೊದಲ ಒಪ್ಟೋಸಾರ್ ಉಪಗ್ರಹವಾಗಿದ್ದು, ಎಲೆಕ್ಟ್ರೋ - ಆಪ್ಟಿಕಲ್ (ಇಒ) ಮತ್ತು ಸಿಂಥೆಟಿಕ್ ಅಪರ್ಚರ್ ರೇಡಾರ್ (ಎಸ್‌ಎಆರ್) ಸೆನ್ಸಾರ್‌ಗಳನ್ನು ಒಂದೇ ಕಾರ್ಯಾಚರಣಾ ವೇದಿಕೆಗೆ ಸಂಯೋಜಿಸುತ್ತದೆ.

ಇಒ ಸೆನ್ಸಾರ್‌ಗಳು ಸೂರ್ಯನ ಬೆಳಕು ಮತ್ತು ಶುಭ್ರವಾದ ಆಕಾಶದಲ್ಲಿ ಹೈ ರೆಸಲ್ಯೂಷನ್ ಚಿತ್ರಗಳನ್ನು ಸೆರೆಹಿಡಿಯಲಿದೆ. ಮತ್ತೊಂದೆಡೆ ಎಸ್‌ಎಆರ್ ಸೆನ್ಸಾರ್‌ಗಳು ರೇಡಾರ್ ಪಲ್ಸ್ ಗಳನ್ನು ಬಳಸಿಕೊಂಡು ಎಲ್ಲಾ ರೀತಿಯ ಹವಾಮಾನದಲ್ಲೂ ನಿರಂತರವಾಗಿ ಚಿತ್ರಗಳನ್ನು ಸೆರೆಹಿಡಿಯಲಿದೆ.

ಈ ಕುರಿತು ಪ್ರತಿಕ್ರಿಯಿಸಿದ ಗ್ಯಾಲಕ್ಸ್ ಐ ಸಂಸ್ಥಾಪಕ ಮತ್ತು ಸಿಇಒ ಸುಯಶ್ ಸಿಂಗ್, ಮಿಷನ್ ದೃಷ್ಟಿ ಉಪಗ್ರಹ ಈಗ ಯಶಸ್ವಿಯಾಗಿ ಕಕ್ಷೆಗೆ ಸೇರಿದೆ. ಈಗ ಕಾರ್ಯಾಚರಣೆಯ ಪ್ರಕ್ರಿಯೆ ಪೂರ್ಣಗೊಳಿಸುವುದರತ್ತ ಗಮನ ಹರಿಸಿದ್ದೇವೆ. ಅಲ್ಲದೆ ಒಪ್ಟೋಸಾರ್ ಪೇಲೋಡ್ ಮೂಲಕ ದೊರೆಯುವ ವಿಭಿನ್ನ ದತ್ತಾಂಶಗಳ ಬಗ್ಗೆ ಜಾಗತಿಕವಾಗಿ ಹೆಚ್ಚಿನ ಆಸಕ್ತಿ ವ್ಯಕ್ತವಾಗುತ್ತಿರುವುದನ್ನು ಕಾಣುತ್ತಿದ್ದೇವೆಂದಿದ್ದಾರೆ.

ಸಾಂಪ್ರದಾಯಿಕ ಉಪಗ್ರಹ ಮಿತಿಗಳನ್ನು ಪರಿಪರಿಸಲು ಹಾಗೂ ವಿಭಿನ್ನ ಪರಿಸ್ಥಿತಿಯಲ್ಲಿ ವಿಶ್ವಾಸಾರ್ಹ ದತ್ತಾಂಶ ಸಂಗ್ರಹಿಸಲು ಈ ಉಪಗ್ರಹ ನೆರವಾಗಲಿದೆ ಎಂದು ಕಂಪನಿ ಹೇಳಿದೆ. ಇದು ದ್ವಿ-ಬಳಕೆಯ ಭೂ ವೀಕ್ಷಣಾ ಉಪಗ್ರಹವಾಗಿದ್ದು, ರಕ್ಷಣೆ, ಭದ್ರತೆ, ಕೃಷಿ, ವಿಪತ್ತು ನಿರ್ವ ಹಣೆ, ಸಾಗರ ಮೇಲ್ವಿಚಾರಣೆ ಹಾಗೂ ಮೂಲಸೌಕರ್ಯ ಯೋಜನೆಗಳಲ್ಲಿ ಸಹಕಾರಿಯಾಗಲಿದೆ.

ಇತ್ತೀಚಿನ ಇಸ್ರೋದ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಲಾದ ಭಾರತದ 29 ಸಕ್ರಿಯ ಭೂ ವೀಕ್ಷಣಾ ಉಪಗ್ರಹಗಳ ಸಾಮರ್ಥ್ಯಕ್ಕೆ ಈ ಯೋಜನೆ ಪೂರಕವಾಗುವ ನಿರೀಕ್ಷೆಯಿದೆ.

2030ರ ವೇಳೆಗೆ ಮಿಷನ್ ದೃಷ್ಟಿ ಸಾಮರ್ಥ್ಯವನ್ನು 10 ಉಪಗ್ರಹಗಳಿಗೆ ಹೆಚ್ಚಿಸುವ ಗುರಿ ಯನ್ನು ಗ್ಯಾಲಕ್ಸ್ ಐ ಹೊಂದಿದೆ. ಆ ಮೂಲಕ ಭಾರತಕ್ಕೆ ದೃಢವಾದ ಭೂ ವೀಕ್ಷಣಾ ಮೂಲ ಸೌಕರ್ಯ ಅಭಿವೃದ್ಧಿಸಲು ಯೋಜಿಸಿದೆ.

# ಧಾರ್ಮಿಕ ಸಂಸ್ಕಾರದೊಂದಿಗೆ ಬದುಕು ರೂಪಿಸಿಕೊಳ್ಳಿ

• ಪ್ರಜೋದಯ ವರದಿ

**ಹಾಸನ:** ಉತ್ತಮ ಧಾರ್ಮಿಕ ಸಂಸ್ಕಾರ ಮತ್ತು ಸನ್ನಢತೆಯೊಂದಿಗೆ ಯುವ ಜನಾಂಗ ಬದುಕನ್ನು ರೂಪಿಸಿಕೊಳ್ಳಬೇಕೆಂದು ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಹೆಚ್.ವಿ. ಹರೀಶ್ ಅವರು ತಿಳಿಸಿದರು.



ನಗರದ ಶ್ರೀ ಕ್ಷೇತ್ರ ಕಾಳಿಕಾಂಬ ಕಮಠೇಶ್ವರ ದೇವಾಲಯದ ವಿಶ್ವಕರ್ಮ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಲಾಗಿದ್ದ ಪ್ರಥಮ ವಿಶ್ವಕರ್ಮ ವಧು-ವರರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವಕರ್ಮ ಜನಾಂಗಕ್ಕೆ ಅನುವಂಶೀಯವಾಗಿ ಬಂದಿರುವ ಕೌಶಲ್ಯವನ್ನು ವೃತ್ತಿಯಾಗಿಸಿಕೊಂಡು ಸರ್ವ ಜನಾಂಗದ ಬೆನ್ನೆಲುಬಾಗಿ ಕೀರ್ತಿವಂತರಾಗಿ, ದೇಶದ ಪರಂಪರೆ ಸಂಸ್ಕೃತಿಯ ವಾರಸುದಾರರಾಗಬೇಕು. ಗುರು-ಹಿರಿಯರನ್ನು ಗೌರವಿಸುತ್ತಾ ಧಾರ್ಮಿಕ ತಳಹದಿಯ ಮೇಲೆ ಸಮಾಜವನ್ನು ಮುನ್ನಡೆಸಬೇಕೆಂದರು.

ವಿದ್ಯಾವಂತರು ನಗರ ಜೀವನಕ್ಕೆ ಮಾರು ಹೋಗದೆ ಕೃಷಿಯನ್ನು ಅವಲಂಬಿಸಿ ಆರೋಗ್ಯ ಪೂರ್ಣವಾದ ನೆಮ್ಮದಿಯ ಜೀವನ ಸಾಗಿಸುತ್ತಿರುವ ಹಳ್ಳಿಗರನ್ನು ತಮ್ಮ ಬಾಳಸಂಗಾತಿಯನ್ನಾಗಿ ಮಾಡಿಕೊಂಡು ಉತ್ತಮ ವೈವಾಹಿಕ ಬದುಕನ್ನು ಸಾಗಿಸಬೇಕು ಎಂದರು.

ಪುರೋಹಿತ್ ಎನ್.ಪ್ರವೀಣ್ ಕುಮಾರ್, ಬ್ರಹ್ಮಾನಂದ ಮತ್ತು ನಾಗರಾಜು ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ವಿಶ್ವಕರ್ಮ ಸಮಾಜದ ಉಪಾಧ್ಯಕ್ಷ ಎ.ಸಿ.ನಾರಾಯಣ್, ಪ್ರಧಾನ ಕಾರ್ಯದರ್ಶಿ ಕೆ.ರಾಘವೇಂದ್ರ ಕುಮಾರ್, ಖಜಾಂಚಿ ಕೆ.ಎಸ್.ಜಗದೀಶ್, ನಿರ್ದೇಶಕರಾದ ಜಿ.ಎಸ್.ಜಯರಾಜ, ಕೆ.ಟಿ.ನಾಗೇಶ್, ಅನಿಲ ಪದ್ಮನಾಭ, ಛಾಯಾ ಲೋಕೇಶ್, ಕೆ.ಟಿ. ಯೋಗೇಶ್, ಕಾಳಿಕಾಂಬ ದೇವಾಲಯದ ಪೂಜಾ ಸಮಿತಿ ಅಧ್ಯಕ್ಷ ಎಚ್.ಕೆ.ಆನಂದ್, ತಾಲ್ಲೂಕು ವಿಶ್ವಕರ್ಮ ಸಮಾಜದ ಉಪಾಧ್ಯಕ್ಷ ಎ. ಬ್ಯಾಟರಂಗಾಚಾರ್, ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಆನಂದ್, ಸಹ ಕಾರ್ಯದರ್ಶಿ ಎಂ.ಟಿ.ಸುರೇಶ್, ಬಿ. ಲೋಕೇಶ್, ಜಿ.ಆರ್.ತಿಮ್ಮಚಾರ್ ಹಾಜರಿದ್ದರು.

# ತಿರುಮನಹಳ್ಳಿ-ಗಿರಿಕಲ್ಲಳ್ಳಿ ರಸ್ತೆ ಕಾಮಗಾರಿಗೆ ಭೂಮಿ ಪೂಜೆ

• ಪ್ರಜೋದಯ ವರದಿ

**ಬೇಲೂರು:** ರಂಗನಾಥಸ್ವಾಮಿ ದೇವಾಲಯಕ್ಕೆ ಪ್ರಬಾವಳಿ ಮಾಡಿಸಲು ಹಣ ಹಾಗೂ ರಸ್ತೆ ಅಭಿವೃದ್ಧಿಗೆ ಭೂಮಿ ಪೂಜೆ ನೆರವೇರಿಸುವ ಮೂಲಕ ಚುನಾವಣೆ ಸಂದರ್ಭದಲ್ಲಿ ಕೊಟ್ಟ ಮಾತನ್ನು ನಾನು ಉಳಿಸಿ ಕೊಂಡ ತೃಪ್ತಿ ನನಗಿದೆ ಎಂದು ಶಾಸಕ ಹೆಚ್. ಕೆ.ಸುರೇಶ್ ಅವರು ಹೇಳಿದರು.



ತಾಲ್ಲೂಕಿನ ತಿರುಮನಹಳ್ಳಿ ಹಾಗೂ ಗಿರಿಕಲ್ಲಳ್ಳಿ ಗ್ರಾಮದ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಚುನಾವಣೆ ಸಂದರ್ಭ ಗ್ರಾಮಕ್ಕೆ ಬಂದಾಗ ಗ್ರಾಮಸ್ಥರು ಹಾಗೂ ಅರ್ಚಕರು ಶ್ರೀ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಬೆಳ್ಳಿಯ ಪ್ರಭಾವಳಿ ಬೇಕು ಅದನ್ನು ನೀವೆ ಮಾಡಿಸಿ ಕೊಡಬೇಕೆಂದು ಹೇಳಿದ್ದರು. ಕಳೆದ 40 ವರ್ಷಗಳಿಂದ ಓಡಾಡಲು ಸರಿಯಾದ ರಸ್ತೆ ಇಲ್ಲ, ಅದರಿಂದ ಈ ಭಾಗದ ಗ್ರಾಮಸ್ಥರು ವಾಹನಗಳಿರಲಿ ನಡೆದುಕೊಂಡು ಓಡಾಡಲು ಸಹ ಪರದಾಡುವಂತ್ತಾಗಿತ್ತು. ಅದನ್ನೂ ಸಹ ಗ್ರಾಮಸ್ಥರು ಬೇಡಿಕೆ ಇಟ್ಟಿದ್ದರು. ನಾನೊಬ್ಬ ಶ್ರೀ ರಂಗಸ್ವಾಮಿ ಭಕ್ತನಾಗಿ ದೇವರಿಗೆ ಪ್ರಭಾವಳಿ ಮಾಡಿಸಲು 2 ಲಕ್ಷ ರೂ. ಕೊಡುತಿದ್ದೇನೆ. ಜೊತೆಗೆ ತಿರುಮನಹಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆಯ 27 ಲಕ್ಷ ರೂ.ಅನುದಾನದಲ್ಲಿ ಗ್ರಾಮಸ್ಥರ ಸಹಕಾರದೊಂದಿಗೆ ಉತ್ತಮ ಗುಣಮಟ್ಟದಲ್ಲಿ ಕೆಲಸ ಮಾಡಿಸಲು ಮುಂದಾಗಿದ್ದೇನೆ ಎಂದರು.

ಸಮೀಪದ ಗಿರಿ ಕಲ್ಲಳ್ಳಿ ಗ್ರಾಮಕ್ಕೂ ಸರಿಯಾದ ರಸ್ತೆ ಇಲ್ಲದ ಕಾರಣ ಅಲ್ಲಿನ ಗ್ರಾಮಸ್ಥರ ಬೇಡಿಕೆಯಂತೆ 25 ಲಕ್ಷ ರೂ. ಅನುದಾನದಲ್ಲಿ ಕೆಲಸ ಮಾಡಿಸಲು ಕ್ರಮ ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಈ ಭಾಗದ ಎಲ್ಲಾ ಗ್ರಾಮಗಳ ರಸ್ತೆ ಸೇರಿ ಇನ್ನಿತರೆ ಕೆಲಸಗಳನ್ನು ಮಾಡಿಸ ಲಾಗುವುದು. ಗ್ರಾಮಕ್ಕೆ ಬೇಕಾದ ಮೂಲ ಸೌಲಭ್ಯಗಳನ್ನು ಕಲ್ಪಿಸಲು ಯೋಜನೆ ರೂಪಿಸಲಾ ಗುವುದು. ಗ್ರಾಮಸ್ಥರು ಈಗಾಗಲೇ ಸಮುದಾಯ ಭವನ, ಬಸ್ ನಿಲ್ದಾಣ, ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣಕ್ಕೆ ಬೇಡಿಕೆ ಇಟ್ಟಿದ್ದಾರೆ. ಅವುಗಳನ್ನು ಮುಂದಿನ ದಿನಗಳಲ್ಲಿ ಮಾಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ಸಂದರ್ಭದಲ್ಲಿ ಗ್ರಾಮಸ್ಥರಾದ ಶಿವೇಗೌಡ, ರಾಮಚಂದ್ರು, ಕೃಷ್ಣಮೂರ್ತಿ, ಶಿವಸ್ವಾಮಿ, ಗುರುಮೂರ್ತಿ, ಮಧುಕುಮಾರ್, ಸಾವಿತ್ರಮ್ಮ, ಲಕ್ಷ್ಮಮ್ಮ, ವಾಸುದೇವ್ ಇತರರು ಹಾಜರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019